ಮಾನುಷಿ

ತಿಂಗಳ ಪತ್ರಿಕೆ

ಅಕ್ಟೋಬರ್ : 2000

❄ ನನ್ನ ಕತೆ.....ನಮ್ಮ ಕತೆ - ಒಂದು ಭಾವ ವಿಶ್ಲೇಷಣೆ

❄ ಬದಲಾಗುತ್ತಿರುವ ನಮ್ಮ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿಗಿರುವ ಸಮಸ್ಯೆಗಳು

❄ ಎರಡು ಪ್ರತಿಭಟನಾ ವರದಿಗಳು

❄ 'ಬದುಕಲು ಮರೆತ ಸ್ತ್ರೀ' ಒಂದು ಅನಿಸಿಕೆ

❄ ಮೂಲೆಗುಂಪಾದ ಕ್ರಿಶ್ಚಿಯನ್ ಮಸೂದೆಗಳು

ಮಾನಸ

ತಿಂಗಳ ಪತ್ರಿಕೆ

ಸಂಪುಟ : 16 ಸಂಚಿಕೆ : 9

ಅಕ್ಟೋಬರ್ : 2000

ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.

ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ......

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ನನ್ನ ಕತೆ ...ನಮ್ಮ ಕತೆ - ಒಂದು ಭಾವ ವಿಶ್ಲೇಷಣೆ

○ ಜಯಶ್ರೀ ದೇಶಪಾಂಡೆ

ಒಂದು ಸ್ಥಿತ್ಯಂತರಕ್ಕೆ ಒಳಗಾಗುತ್ತಿರುವ, ಮೌಲ್ಯ ವಿಘಟನೆಯನ್ನು ಅನುಭವಿಸುತ್ತಿರುವ ಸಮಾಜದ ಮೂಲಸ್ಥಾನವಾಗಿರುವ ನಮ್ಮ ದೇಶದಲ್ಲಿ, 'ಸ್ತ್ರೀ' ಆಗಿ ಜನಿಸಿದ ಜೀವಿಗಳು ಪುರುಷ ನಿರ್ಮಿತ ಇತಿಹಾಸದಡಿಯಲ್ಲಿ ತಮ್ಮ ಅಸ್ತಿತ್ವದ ಅಗತ್ಯವನ್ನು ಹೆಜ್ಜೆ ಹೆಜ್ಜೆಗೂ ಖಚಿತಪಡಿಸಿಕೊಳ್ಳುವ ಹೋರಾಟವನ್ನೇ ತಮ್ಮ ಬದುಕಾಗಿಸಿಕೊಂಡ ಕಥೆಯ ವ್ಯಥೆಯು ಶಬ್ದಗಳಲ್ಲಿ ಸಂಗ್ರಹಿತ ವಾಗಿರುವ ಕೃತಿ, "ನನ್ನ ಕಥೆ - ನಮ್ಮ ಕಥೆ".

ಲೇಖಕಿ ಫ್ಲೇವಿಯಾರ ಮಾತುಗಳೇ ಹೇಳುವಂತೆ ಅವರೊಬ್ಬರ ಕಥೆ ಅಲ್ಲವೇ ಅಲ್ಲ ಇದು. ಇಲ್ಲಿ ಸೂಚಿತ ವಾಗಿರುವ ದುರಂತವೆಂದರೆ ವಿಶ್ವವ್ಯವಸ್ಥೆಯ ಮೂಲಶಕ್ತಿಯ ಸಂಕೇತವಾಗಿ 'ಆದಿಶಕ್ತಿ'ಯಾಗಿ ಪುರುಷನಿಂದ ಗುರುತಿಸಲ್ಪಡುವ ಸ್ತ್ರೀ ವಾಸ್ತವ ಬದುಕಿನಲ್ಲಿ ಆತನ ಅಡಿಯಾಳಾಗಿ ಮಾರ್ಪಡುವ ಕಥೆ. ಈ ಎರಡು ಅತಿರೇಕಗಳ ನಡುವೆ ತನ್ನ ನಿಜಸ್ವರೂಪ ಏನೆಂದು ಕಂಡುಕೊಳ್ಳಲಾಗದೆ ನಿರಂತರ ಹೋರಾಟದಲ್ಲಿ ಬಸವಳಿಯುವವರ ಸಂಗತಿ. ಹೆಣ್ಣಿನ ಜೀವನವನ್ನು ರೂಪಿಸುವ ಶಕ್ತಿಗಳು ಹೆಣ್ಣಾಗಿಲ್ಲದೆ ಹೋಗಿ, ಅವಳನ್ನು ಸಾಂಪ್ರದಾಯಿಕ 'ಸ್ತ್ರೀ' ಮೌಲ್ಯಗಳ ಆಚೆಗೆ ಬರಗೊಡದಂತೆ ಕಟ್ಟಿಹಾಕಿ ಅದಕ್ಕೆ ಮನುಸ್ಮೃತಿಯ 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎನ್ನುವ ಶಬ್ದಪುಂಜವನ್ನು ಆಧಾರವಾಗಿರಿಸಿಕೊಂಡು ಅದರ ಮೂಲಾರ್ಥ ವನ್ನೇ ತಮ್ಮ ಅನುಕೂಲಕ್ಕೆ ಬಳಸಿಕೊಂಡ ಪುರುಷವರ್ಗ ತನ್ನ ಅತಿರೇಕಗಳ ವಿರುದ್ಧ ಬಂಡೇಳುವ ಹೆಣ್ಣು ತನ್ನ ಉಳಿವಿಗಾಗಿಯೂ ಹೋರಾಟಕ್ಕಿಳಿಯುವುದನ್ನು ಸಹಿಸದೆ ಹೋಗುವ ಪ್ರಸಂಗಗಳ ನಿರ್ಭಾವುಕ ಉಕ್ತಿಯಂತಿದೆ ಫ್ಲೇವಿಯಾರ ಕಥನ.

ಇಪ್ಪತ್ತರ ಹೊಸ್ತಿಲಿನ ಮುಗ್ಧ ತರುಣಿಯ, ಅಪರಿಚಿತ ಅನುಭವಗಳೊಂದಿಗಿನ ಮುಖಾಮುಖಿಯೊಂದಿಗೆ ಆರಂಭ ವಾಗುವ ಕಥನಕ್ಕೆ ಹಿನ್ನೆಲೆಯಾಗಿ ಕೃತಿಯ ಅನುವಾದಕಿ ನೇಮಿಚಂದ್ರರ ಪ್ರಾಸ್ತಾವಿಕ ಲೇಖನ ಫ್ಲೇವಿಯಾರ ಬಾಲ್ಯದ ಏರುಪೇರಿನ, ತದನಂತರದ ಉತ್ಸಾಹೀ, ಲವಲವಿಕೆಯಿಂದ ಕೂಡಿದ ಬುದ್ಧಿಮತಿಯೊಬ್ಬಳ ಚಿತ್ರಣ ನೀಡುತ್ತದೆ. ಕೊನೆಯ ಶಬ್ದದವರೆಗೂ ಅನಿವಾರ್ಯ ಹೋರಾಟವೊಂದರ ಹಿನ್ನೆಲೆಯಲ್ಲಿ ಫ್ಲೇವಿಯಾರ ವ್ಯಕ್ತಿತ್ವದ ಮದುವೆಯ ಮೊದಲ ಹೆಜ್ಜೆಯೇ ದುರಂತದ ದಾರಿಗೆ ಕಾಲಿಟ್ಟು ಹೊಯ್ದಾಡಿತ್ತು. ತಂದೆ ತಾಯಿಂದ ದೂರವಾಗಿ, ಎಲ್ಲೋ ಹುಟ್ಟಿ ಎಲ್ಲೋ ಬೆಳೆದ ಮಗುವಾದರೂ ಮದುವೆಯ 'ಅರ್ಥ'ವನ್ನುಳಿಸಿಕೊಳ್ಳುವುದಕ್ಕೆ ಫ್ಲೇವಿಯಾ ಹೆಜ್ಜೆ ಹೆಜ್ಜೆಗೂ ತೆತ್ತ ಬೆಲೆಗೆ ಲೆಕ್ಕವಿಡುವುದು ಅಸಾಧ್ಯ. ಉನ್ನತ ಶಿಕ್ಷಣ ಪಡೆದು, ದೊಡ್ಡ ಹುದ್ದೆ, ಸಮಾಜದಲ್ಲಿ ಮಾನ-ಮರ್ಯಾದೆಗಳಿಗೆ ಭಾಜನನಾದವನೊಬ್ಬ ಬೀದಿಬದಿಯ ಹೆಂಡಗುಡುಕನಿಗಿಂತ ಹೀನಸ್ತರಕ್ಕಿಳಿದು ಹೆಂಡತಿಯ ಶರೀರವನ್ನು ತನ್ನ ಸೊತ್ತಾಗಿ ಭಾವಿಸಿ ಏಟುಗಳಿಂದ ನಿರಂತರ ಹಣ್ಣುಗಾಯಿ ನೀರುಗಾಯಿ ಮಾಡುವ ವ್ಯಕ್ತಿ. ಮದುವೆಯ ಸಂದರ್ಭದಲ್ಲಿ ಅವಳ ಮಾನ ಪ್ರಾಣಗಳಿಗೆ ರಕ್ಷಕನಾಗಿದ್ದು, ಮುಂದಿನ ಬಾಳಿಡೀ ಆಧಾರವಾಗಿದ್ದು ಜತೆಗೊಡುವೆನೆಂದು ಮಾಡಿದ ಪ್ರಮಾಣಗಳಿಗೆ ದ್ರೋಹ ವೆಸಗುವುದನ್ನು ಆಕೆ ಪ್ರತಿಭಟಿಸುತ್ತಾಳೆ.

"ನನ್ನ ದೇಹವನ್ನು ನೀ ಚಿಂದಿ ಮಾಡಬಹುದು, ನನ್ನ ಮನಸ್ಸನ್ನಲ್ಲ...." ದೇಹದ ಗಾಯಗಳು ಮಾಯ್ದರೂ ಕಲೆ ಉಳಿಯುತ್ತದೆ. ಕ್ರೌರ್ಯ-ಹಿಂಸೆ-ರಕ್ತಪಾತಗಳಿಗದು ಸಾಕ್ಷಿ ಹೇಳುತ್ತದೆ. ಮನಸ್ಸಿಗೆ ಬಿದ್ದ ಬರೆಗಳು ಮಾತ್ರ ಸುಲಭವಾಗಿ ಮಾಯುವುದೇ ಇಲ್ಲ. ನೆನಪಾದ ಕ್ಷಣಗಳಲ್ಲೆಲ್ಲ ಅವುಗಳಿಂದ ರಕ್ತವೊಸರುತ್ತದೆ. ಛಿದ್ರವಾದ ಮನಸ್ಸು ಸರಿಯಾಗುವುದು ವ್ಯಕ್ತಿತ್ವಕ್ಕೆ ಆದ ಹಾನಿ ದುರಸ್ತಿಯಾಗುವುದು ಅಸಂಭವ ಸಂಭವನೀಯತೆ.

'ವಿಧೇಯ'ಳಾಗಿರುವುದನ್ನು ಹೊಡೆತದ ಮುಖಾಂತರ ಹೇಳಿಕೊಡುವುದರೊಂದಿಗೆ ಮುಂದುವರಿದ ಗಂಡನ ಹಿಂಸೆಯನ್ನು ದುರ್ಬಲ ಪ್ರತಿಭಟನೆಗಳೊಂದಿಗೆ ಸಹಿಸುತ್ತಲೇ ನಡೆದ ಆಕೆಯ ಬದುಕಿನಲ್ಲಿ ಶರೀರ ಸಂಬಂಧದ ಅನಿವಾರ್ಯತೆಯ ಫಲವಾಗಿ ಮೂಡಿಬಂದ ಮಕ್ಕಳಿಗೂ ಅಪ್ಪನಿಂದ ಹಿಂಸೆಯ ಕೊಡುಗೆಯಲ್ಲಿ ಭೇದವಿಲ್ಲ. ಅದು ಕ್ರೌರ್ಯದ ಪರಮಾವಧಿ. ಆದರೂ ಹೆತ್ತ ತಾಯಿಯೇ ಮಗಳಿಗೆ "ಫ್ಲೇವಿ, ಇದು ಮದುವೆ ಕಣೆ. ವಿಧೇಯಳಾಗಿರೋದನ್ನ ಕಲಿ, ಎದುರು ವಾದಿಸಬೇಡ- ಪ್ರಶ್ನೆ ಹಾಕಬೇಡ - ನಿನ್ನ ಮೆದುಳು ಉಪಯೋಗಿಸಬೇಡ" ಎಂಬ ಉಪದೇಶ ನೀಡಿದ್ದರ ಹಿನ್ನೆಲೆಯಲ್ಲಿ ಇದ್ದಂತಹ ಅಸಹಾಯಕತೆಯ ಪ್ರಮಾಣವಾದರೂ ಎಷ್ಟು? 'ಹೊಂದಿಕೊಂಡು ಹೋಗು ವುದನ್ನೂ' 'ಆತನನ್ನು ರೇಗಿಸದೆ ಇರುವುದನ್ನೂ' 'ವಿಧೇಯತೆ' ಯನ್ನೂ ಉಪದೇಶಿಸುವ ಬಂಧುವರ್ಗ ಅವಳ ನೋವನ್ನು - ಗೋಳನ್ನು ಅರ್ಥಮಾಡಿಕೊಳ್ಳುವ ಗೋಜಿಗೇ ಹೋಗುವುದಿಲ್ಲ. ದಾಸ್ಯವೇ ಅಭ್ಯಾಸವಾಗಿ, ಬಡಿತ, ಬೈಗುಳು, ತಿರಸ್ಕಾರಗಳು ದಿನಚರಿಯಾದಾಗ ಆತ್ಮವಿಶ್ವಾಸವೆಂಬ ಪದದ ಪರಿಚಯವೇ ಮರೆತುಹೋಗಬಹುದು. ಮಕ್ಕಳು ಬೆಳೆಯುವ ವಾತಾವರಣ ದಲ್ಲಿರುವ ಹಿಂಸೆ ಅವರ ಬದುಕನ್ನು ಅರಳಲು ಬಿಡುವುದೇ ಇಲ್ಲ. ಆರಂಭದಲ್ಲಿಯೇ ಮುರುಟಿಸಿ ಹಾಕುತ್ತದೆ. ತಾಯಿಯ ಹೀನಾಯ ಅಸಹಾಯಕತೆಯಲ್ಲಿ ತಮ್ಮ ಬಾಲ್ಯವಿಡೀ ಭಯದ ಕಪ್ಪುನೆರಳಡಿ

ಕಳೆಯುವ ಮಕ್ಕಳು ಮಾನಸಿಕವಾಗಿ ಕುಗ್ಗಿ ಹೋಗುತ್ತಾರೆ. ಅವರ ಮನಸ್ಸಿನಾಳದಲ್ಲಿ ಅಪ್ಪ-ಅಮ್ಮ, ಗಂಡ-ಹೆಂಡತಿ ಎಂಬ ಸಂಬಂಧಗಳ ಬಗ್ಗೆ ಆಂತರಂಗಿಕ ಭಯೋದ್ವೇಶ, ತಿರಸ್ಕಾರಗಳು ನೆಲೆಯಾಗುತ್ತವೆ.

ಚರ್ಚಿನ ಪಾದ್ರಿ, ಪೊಲೀಸರ ರಕ್ಷಣೆ, ವೈವಾಹಿಕ ಕೌನ್ಸಿಲರುಗಳ ಸಲಹೆ, ಕೊನೆಗೆ ನ್ಯಾಯಾಲಯದ ಪರಿಹಾರವೂ ಸಹ 'ಬಡಿಸಿಕೊಂಡು ಬದುಕುವ' ಮಹಿಳೆಯ ಸಹಾಯಕ್ಕೆ ಬರಲಾರದೆ ದೂರ ಉಳಿದು ತಮಾಷೆ ನೋಡುವ ಪ್ರಸಂಗಗಳ ದಾರುಣತೆಯಿಲ್ಲದೆ. ಅದು ಸಾಲದೆಂಬಂತೆ 'ಹೊಂದಿಕೊಂಡು ಹೋಗುವ' ನೀತಿ ಪಾಠವನ್ನು ಉಣಬಡಿಸಿ ಅಸಹಾಯ ಮನಸ್ಸಿಗೆ ಇನ್ನೆರಡು ಬರೆಗಳನ್ನಿಕ್ಕುತ್ತವೆ. ಬಿಡುಗಡೆಯ ದಾರಿಯಲ್ಲಿ ಇಡಲೆಂದು ಎತ್ತಿದ ಪ್ರತಿಯೊಂದು ಹೆಜ್ಜೆಯೂ ಉದ್ದೇಶಿತ ಕಿಟಕಿಯನ್ನು ತೆರೆಯದೆ ಕ್ರೌರ್ಯದ ಜಗತ್ತಿನ ವಿಷವರ್ತುಲಕ್ಕೇ ಮತ್ತೆ ಮತ್ತೆ ತಂದಿಳಿಸುತ್ತದೆ. ಎಲ್ಲವನ್ನೂಮೀರಿಸಿ, ವಿಚ್ಛೇದನೆ ಪಡೆಯುವ ಸಾಧ್ಯತೆಗಳನ್ನು ನಿರಾಕರಿಸುವ ಜಾತ್ಯಾಧಾರಿತ ಕಾನೂನು ಈ ತಾಯಿ ಮಕ್ಕಳ ಮನೋದೈಹಿಕ ಯಾತನೆಗಳನ್ನು ಇಮ್ಮಡಿಸುತ್ತಲೇ ಹೋಗುತ್ತದೆ. ಮನೆಯಿಂದ ಹೊರನಡೆದರೆ ತೋಳನಂತಹ ಜಗತ್ತು ಮತ್ತೆ ಅದೇ ಕೂಪಕ್ಕೆ ಮರಳುವ ಅನಿವಾರ್ಯತೆಗಳನ್ನು ಸೃಷ್ಟಿಸುತ್ತದೆ.

ಕೋರ್ಟಿನ ಕಟಕಟೆಯಲ್ಲಿ "ಇನ್ನೂ ನಾ ನಿನ್ನ ಹೊಡೆಯುವುದಿಲ್ಲ. ಹಿಂಸೆ ಮಾಡುವುದಿಲ್ಲ, ನಿನ್ನ ಖರ್ಚಿಗೆ ಹಣ-ಸ್ವಾತಂತ್ರ್ಯ ಕೊಟ್ಟು ಈ ಮದುವೆಯನ್ನು ಉಳಿಸಿಕೊಳ್ಳುತ್ತೇನೆ" ಎಂದು ಪ್ರಮಾಣ ಮಾಡಿ ಕಾಗದಕ್ಕೆ ಸಹಿ ಹಾಕುವ ಗಂಡ ಮನೆ ಸೇರಿದ ಅನಂತರ ಅದರೊಳಗಿನ ಒಂದೊಂದು ವಚನವನ್ನೂ ತುಳಿದು ಹಾಕಿ "ಈಗ ನಿನ್ನನ್ನು ನಾ ಬಡಿದರೆ ಆ ನ್ಯಾಯಾಧೀಶ ಬಂದು ಬಿಡಿಸುವನೆ? ಇದು ಪುರುಷ ಪ್ರಪಂಚ. ನೀ ಎಲ್ಲಿಗೆ ಓಡಿದರೂ ನಿನ್ನ ಕಿರುಬೆರಳನ್ನೂ ಅಲ್ಲಾಡಿಸದೆ ನಿನ್ನ ಮರಳಿ ಪಡೆಯಬಲ್ಲೆ" ಎಂದು ಕೂಗಿ ಕ್ರೌರ್ಯದ ಪ್ರತಿನಿಧಿಯಾಗುತ್ತಾನೆ.

ಹೆಂಡತಿ-ಗೃಹಿಣಿ-ತಾಯಿಯ ವ್ಯಕ್ತಿತ್ವಗಳಲ್ಲಿ ಯಾವುದನ್ನೂ ಉಳಿಸಿಕೊಳ್ಳಲಾಗದೆ ಮಕ್ಕಳ ದೈಹಿಕ-ಆರ್ಥಿಕ ಸುರಕ್ಷೆಗಾಗಿ ಅವರನ್ನು ಅಗಲಿ ವರ್ಷಗಳ ಕಾಲ ದೂರ ಉಳಿಯುವ ತಾಯಿಯ ಮನದ ಸಂಕಟಗಳಿಗೆ ವ್ಯಾಖ್ಯೆ ಬರೆಯುವುದು ಅಸಾಧ್ಯ. ಇಚ್ಛಾಶಕ್ತಿ, ಉಳಿವಿನ ಹಂಬಲಗಳೇ ದಿಕ್ಕು ತೋರುವ ದೀಪಗಳಾಗಿ ಒಂದು ಹೋರಾಟ ಮುಂದುವರಿಯಿತು. ಸ್ತ್ರೀ ಸಮಸ್ಯೆಗಳ ವಿಮೋಚನಾ ಸಂಘಗಳ ಚಳುವಳಿಗಳು, 'ಮಹಿಳಾ ಕೇಂದ್ರದ ಸಮಾನ ದುಃಖಿಗಳ ಜತೆಗೆ ಹಿಂಸೆಯ ವಿರುದ್ಧದ ಸೆಣಸಾಟದ ದಾರಿ ಸಾಗಿದ ಫ್ಲೇವಿಯಾ 'ಫೀನಿಕ್ಸ್'ನಂತೆ ತನ್ನದೇ ಬೂದಿಯಿಂದೆದ್ದು ಬಂದ ಜ್ವಾಲೆ. ಶಿಕ್ಷಣ, ಬರಹ, ಪ್ರಬಂಧ ಮಂಡನೆಗಳಂಥ ಸಹಾಯಾಸ್ತ್ರಗಳ ಸಾಂಗತ್ಯದಲ್ಲಿ, ಎಡವಿ ಮೇಲೆದ್ದರೂ ಓಡುವ ಛಲದೊಂದಿಗೆ ಸ್ವನಿರ್ಮಾಣದ ದಾರಿ ನಡೆದದ್ದು ಅನುಪಮ ಸಾಧನೆಯೇ ಸೈ. ನಿರ್ವಾತ ಬದುಕಿಗೊಂದು ಅರ್ಥ ತುಂಬುವ ಅಭಿಯಾನ. 'ಬಡಿಸಿಕೊಂಡ ಪತ್ನಿ'ಯಾಗಿ ಮಾತ್ರ ಗುರುತಿಸಲ್ಪಟ್ಟಾಕೆ ನಿಷ್ಕ್ರಿಯ ಪ್ರತಿಭಟನೆಯನ್ನೇ ಸಕ್ರಿಯ ಹೋರಾಟವನ್ನಾಗಿಸಿಕೊಂಡು ಗೆದ್ದದ್ದು. ಮುರಿದು ಛಿದ್ರವಾದ ವಿವಾಹದ ಸಂಕೋಲೆಯನ್ನು ಕಳಚಿ ಒಗೆದು ಬದುಕಿಗೆ - ಅಸ್ತಿತ್ವಕ್ಕೆ ಹೊಸ ಕಾರಣಗಳನ್ನು ಹುಟ್ಟಿಸಿಕೊಂಡು ಮದುವೆಗೆ ಮುನ್ನ ತಾನು ಕನಸಿನಲ್ಲಿಯೂ ಊಹಿಸದೆ ಇದ್ದ ನ್ಯಾಯವಾದಿಯಾಗಿ, ಕಾನೂನು ತಜ್ಞೆಯಾಗಿ ರೂಪುಗೊಳ್ಳಲು ಹಿಂದಿರುವ ಶಕ್ತಿ ಸಂಕಲ್ಪಬಲ ಅಲ್ಲದೆ ಇನ್ನೇನೂ ಅಲ್ಲ.

ಇಂದು ಸ್ವಸಾಮರ್ಥ್ಯದ ಬಲದಲ್ಲಿ ಸಾರ್ಥಕ ಬದುಕನ್ನು ಹೊಂದಿದ ಫ್ಲೇವಿಯಾ ತನ್ನಂತೆ ಹಿಂಸೆಯ ಬಲಿಪಶುಗಳಾದ ಸ್ತ್ರೀಯರ ನೆರವಿಗೆ ಧಾವಿಸುವುದಕ್ಕೆ ಸ್ಪಷ್ಟ ಕಾರಣಗಳು ಎದ್ದು ತೋರುತ್ತವೆ. ಕೌಟುಂಬಿಕ ಹಿಂಸೆಗೆ ಯಾವ ಹೆಣ್ಣೂ ವಿಕ್ಟಿಮ್ ಆಗಬಾರದು-ತನ್ನ ಹಾಗೆ ಸರ್ವೈವರ್ ಆಗಬೇಕು! ಆದರೆ ವಾಕ್ಯಗಳಲ್ಲಿ ಹೇಳಿ ಮುಗಿಸುವಷ್ಟು ಸುಲಭದ ಸಾಧನೆಯಲ್ಲಿ ಇದು......ಏಕೆಂದರೆ ಪಿತೃಪ್ರಧಾನ ವ್ಯವಸ್ಥೆಯ ಸ್ಪಷ್ಟ ಸ್ವರೂಪವಾಗಿರುವ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅದಕ್ಕೆ ಎದುರು ಬೀಳಲಾಗದೆ ಮೌಲ್ಯಗಳ ವಿಪ್ಲವದ ಮೂಲಕ ಇಡೀ ಸ್ತ್ರೀ ಸಮುದಾಯ ಶತಮಾನಗಳಿಂದ ಯಾತನೆಯ ಶಿಬಿರದಲ್ಲಿ ಬದುಕುತ್ತಿದೆ. ಪುರುಷರ ಪ್ರಾಬಲ್ಯವು ನೈಸರ್ಗಿಕವಾಗಿ ಹೆಣ್ಣಿನ ಮೇಲೆ ಹೇರಿದ 'ಸ್ತ್ರೀ ವೈಶಿಷ್ಟ್ಯದ ಮಾನದಂಡದಲ್ಲಿರುವುದು ಆಕೆಗೆ ಕೇವಲ 'ಕುಟುಂಬಿನಿ' 'ಕ್ಷಮಾರೂಪಿ' 'ದಾಸಿ'ಯ ಪಾತ್ರವಾಗಿದೆ. ಅದನ್ನು ಮೀರಲೆತ್ನಿಸುವಾಕೆ ತೆರುವ ಬೆಲೆ ಕಲ್ಪನಾತೀತ. ಈ ಸತ್ಯವನ್ನು ಮನಗಂಡ ಮಹಿಳೆ ಫ್ಲೇವಿಯಾ.

ಆತ್ಮಕಥನವು ನೋವಿನ ಹಾಡಾಗಿ ಅದರ ಉತ್ತರಾರ್ಧವು ಯಶಸ್ಸಿನ ಸಂಕೇತವಾಗಿ ಹರಿದು ಬಂದಿರುವ 'ನನ್ನ ಕತೆ-ನಮ್ಮ ಕತೆ' ಕನ್ನಡಕ್ಕೆ ಭಾವಾತ್ಮಬಿಂದುವಿನೊಂದಿಗೆ ಇಳಿದು ಬರಲು ಕಾರಣ ಅನುವಾದಕಿಯ ಸಮರ್ಥ ಲೇಖನಿ. 'ಕೌಟುಂಬಿಕ ಹಿಂಸೆ' ಕೇಳಲು-ಓದಲು ಎರಡೇ ಶಬ್ದಗಳ ವಾಕ್ಯ. ಆದರೆ ವಾಸ್ತವವಾಗಿ ಈ ಎರಡು ಪದಗಳ ಗರ್ಭದಲ್ಲಿ ಅಡಗಿದ ಕೋಟಿ ಕೋಟಿ ಮಹಿಳೆಯರ ದುಃಖದ ಕಣ್ಣಹನಿಯನ್ನು ಯಾವ ಸಾಗರದ ನೀರಿಗೆ ಹೋಲಿಸುವುದೂ ತಪ್ಪಾದೀತು.

ಅಂದಿನ-ಗಂಡನ ಏಟುಗಳ ಭಯದಿಂದ ಮುದುರುವ ಭೀತ ತರುಣಿಯಿಂದ ಇಂದಿನ ಪ್ರಸಿದ್ಧ ನ್ಯಾಯವಾದಿ, ಕಾನೂನು ತಜ್ಞೆ, ಮಹಿಳಾ ಹಕ್ಕುಗಳ ಹೋರಾಟಗಾರ್ತಿ, ಹತ್ತು ಹಲವು ಮಹಿಳಾ ಸಂಘಟನೆಗಳ ಸಕ್ರಿಯ ಚಟುವಟಿಕೆಯ ಧೀಮಂತ ಶಕ್ತಿಯಾಗಿ

ಪರಿವರ್ತಿತಳಾದ ಸ್ತ್ರೀಯ ಸಮಗ್ರ ಚಿತ್ರಣವಿಲ್ಲಿ ಲಕ್ಷಾಂತರ ಸಹಾನುಭೂತಿಯ ಹೃದಯಗಳ ಕದ ತಟ್ಟುತ್ತದೆ. ಫ್ಲೇವಿಯಾರ ಹೋರಾಟದ ಫಲಸ್ವರೂಪವಾಗಿ, ಮಹಿಳಾ ಚಳುವಳಿಗೆ ಸಿಕ್ಕ ಜಯವಾಗಿ, ಬಲಾತ್ಕಾರವನ್ನು ಕುರಿತ ಕಾನೂನು, ಸಹಜ ಪಾಲಕ ಹಕ್ಕಿನ ಕಾನೂನು, ಆಸ್ತಿ ಹಕ್ಕಿನ ಕಾನೂನುಗಳು ತಿದ್ದುಪಡಿ ಕಂಡಿವೆ. ಮಹಿಳೆಯರು ತಮ್ಮ ಹಕ್ಕುಗಳ ಬಗ್ಗೆ, ಕಾನೂನು ಜ್ಞಾನದ ಅಗತ್ಯಗಳ ಬಗ್ಗೆ ಅವು ತಮಗೆ ಸಹಾಯಕವಾಗುವಂತೆ ಮಾರ್ಪಡುವ ಬಗ್ಗೆ ಚಿಂತಿಸಲು ತೊಡಗಿದ್ದಾರೆ.

ಈ ದಿಸೆಯಲ್ಲಿ ಫ್ಲೇವಿಯಾ ಮುಂದುವರಿಸಿರುವ ಪ್ರಯತ್ನಗಳು ಅಮೂಲ್ಯವಾಗಿವೆ. ಪ್ರಬಂಧಗಳು, ಪುಸ್ತಕಗಳು, ಪ್ರವಚನಗಳಂತಹ ಸಮರ್ಥ ಮಾಧ್ಯಮಗಳ ಮೂಲಕ ಸ್ತ್ರೀವಾದಿ ದೃಷ್ಟಿಯ ನ್ಯಾಯವಾದವನ್ನು ರೂಪಿಸಲು ಈಕೆ ಕಟಿಬದ್ಧರಾಗಿದ್ದಾರೆ. 'ಜೆಂಡರ್ ಜಸ್ಟಿಸ್ ಸಿರೀಸ್'ನ ಮೂಲಕ ಜರ್ನಿ ಟುಟಿ, ಜಸ್ಟಿಸ್, ಗಿವ್ ಅಸ್ ದಿಸ್ ಡೇ 'ಅವರ್ ಡೇಲಿ ಬ್ರೆಡ್,ಲಾ ಎಂಡ್ ಜೆಂಡರ್‌ಗಳಂಥ ಕೃತಿಗಳು ಮೂಡಿ ಬಂದಿರುವುದು ಸ್ತ್ರೀಯರನ್ನು ಅವರ ವೈವಾಹಿಕ ಹಿಂಸೆಯನ್ನು ಪ್ರತಿಭಟಿಸಲು ಸಿದ್ಧಗೊಳಿಸುವಲ್ಲಿ ನೆರವಾಗುವ ಸಂಗತಿಯಾಗಿದೆ.

'ಮಹಿಳೆ ಕಾನೂನನ್ನು ತಿಳಿಯಬೇಕು. ಅದನ್ನು ತನ್ನ ಪ್ರಯೋಜನಕ್ಕಾಗಿ ಬಳಸಬೇಕು. ಲಿಂಗಭೇದ ಕಂಡಲೆಲ್ಲ ಕಾನೂನನ್ನು ತಿದ್ದುವತ್ತ ಒತ್ತಡ ತರಬೇಕು' ಎಂದು ಚಿಂತನೆಗಳನ್ನು ನಿರಂತರವಾಗಿ ಪ್ರಸರಿಸುತ್ತಿರುವ ಫ್ಲೇವಿಯಾರಿಗೆ 'ನೀರಾಜ ಭಾನೋಟ್' ಪ್ರಶಸ್ತಿ ಹಾಗೂ 'ಅಶೋಕ ಫೆಲೋಶಿಪ್'ಗಳು ಸಂದಿರುವುದು ಆ ಪ್ರಶಸ್ತಿಗಳಿಗೇ ಹೆಮ್ಮೆ ತರುವ ಸಂಗತಿಯೆಂದರೆ ಉತ್ಪ್ರೇಕ್ಷೆಯಾಗಲಾರದು.

ಸ್ತ್ರೀಶಕ್ತಿಯನ್ನು ಉದ್ದೀಪಿಸುವ, ಮಹಿಳೆಯರಲ್ಲಿ ಧೈರ್ಯದ ಕೆಚ್ಚನ್ನು ತುಂಬುವ, ಆತ್ಮವಿಶ್ವಾಸವನ್ನು ಚಲನಶೀಲಗೊಳಿಸುವ, ಜಗತ್ತನ್ನು ಪರಿವರ್ತಿಸುವ ಮನೋಭಾವವನ್ನು ಜಾಗೃತಗೊಳಿಸುವ ಫ್ಲೇವಿಯಾರ ಕತೆ ಬರಿ ಕತೆಯಲ್ಲ - ಸಾಹಸಗಾಥೆ.

ಮಾನಸ ಓದಿದರೆ - ಪುರುಷರನ್ನು ದ್ವೇಷಿಸಬೇಕೆ?

ನಾನು ಒಬ್ಬ ವಿದ್ಯಾರ್ಥಿನಿಯಾಗಿ, ತೃತೀಯಾ ಬಿ.ಎ. ಓದುತ್ತಿರುವೆ. ನಾನು ಮಾನಸ ತಿಂಗಳ ಪತ್ರಿಕೆಯ ಬಗ್ಗೆ ಅಲ್ಪಸ್ವಲ್ಪ ಅಭಿಮಾನವಿದ್ದು ಮತ್ತು ಇದರಲ್ಲಿ ಸ್ವಲ್ಪ ಮಟ್ಟಿಗೆ ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತಿದ್ದೇನೆ.

ಒಂದು ದಿನ ನಮ್ಮ ಪ್ರೊಫೆಸರೊಬ್ಬರು ನನ್ನ ಬಳಿಯಿದ್ದ ಮಾನಸ ಪತ್ರಿಕೆಯನ್ನು ನೋಡಿ ಪತ್ರಿಕೆಯ ಬಗ್ಗೆ ಪ್ರಶ್ನಿಸಿದರು. ಅದಕ್ಕೆ ನಾನು ಸಂಪೂರ್ಣವಾದ ವಿವರವನ್ನು ನೀಡಿದೆ. ಜೊತೆಗೆ ಮಾನಸ ಪತ್ರಿಕೆಯನ್ನು ನೀವು ತೆಗೆದುಕೊಂಡು ಓದಿ ಎಂದು ತಿಳಿಸಿದೆ. ಅದಕ್ಕೆ ಅವರು ನನಗೆ ಸಮಯ ಇರುವುದಿಲ್ಲ ಎಂದರು. ನಂತರ ನಾನು ಅವರ ಪತ್ನಿಗೆ ಕೊಂಡೊಯ್ಯುವಂತೆ ತಿಳಿಸಿದೆ. ಅದಕ್ಕೆ ಅವರು ಏನು ಹೇಳಿದರು ಗೊತ್ತೆ? ಇಲ್ಲ ಇಲ್ಲ ಬೇಡ ಇದನ್ನು ನನ್ನ ಹೆಂಡತಿ ಓದಿದರೆ ನನ್ನ ಮೇಲೆ ದಬ್ಬಾಳಿಕೆ ನಡೆಸಲು ಪ್ರಾರಂಭಿಸುತ್ತಾಳೆ ಮತ್ತು ತನ್ನನ್ನು ಕೀಳಾಗಿ ಕಾಣುವಳು ಎಂದು ಭಯವನ್ನು ವ್ಯಕ್ತಪಡಿಸಿದರು. ಅದಕ್ಕೆ ನಾನು ನೀವು ಯಾಕೆ ಸಾರ್ ಆ ರೀತಿ ಭಾವಿಸುವಿರಿ. ಇದನ್ನು ಓದಿದರೆ ಹೆಂಗಸಿನ ಅಗತ್ಯಗಳನ್ನು ತಿಳಿದುಕೊಳ್ಳಬಹುದು ಮತ್ತು ಹೊರಗಿನ ಪ್ರಪಂಚದಲ್ಲಿ ಇತರ ಸ್ತ್ರೀಯರ ಮೇಲೆ ನಡೆಯುವ ದಬ್ಬಾಳಿಕೆಯ ಬಗ್ಗೆಯು ತಿಳಿದುಕೊಂಡು ಅಕ್ಕಪಕ್ಕದಲ್ಲಿ ನೊಂದ ಸ್ತ್ರೀಯರಿಗೆ ಸಾಂತ್ವನ ಧೈರ್ಯ, ಮನಸ್ಸು ಬರಬಹುದೆಂದು ಹೇಳಿದೆ ಅದಕ್ಕೆ ಅವರು,

ಬೇಡ ಅಮ್ಮ ನೀನು ಈ ಮಹಿಳಾ ಸಂಘಟನೆಗಳಿಗೆ ಒಳಗಾಗಬೇಡ. ಮುಂದೆ ನೀನು ಒಬ್ಬ ಸಾಧಾರಣ ಸ್ತ್ರೀಯಾಗುವ ಬದಲಿಗೆ ಇಡೀ ಗಂಡಸಿನ ಜಾತಿಯನ್ನೇ ವಿರೋಧಿಸುವಂತಹ ಹೆಣ್ಣಾಗುವೆ ಮತ್ತು ಕಂಡ ಕಂಡ ಗಂಡಸರನ್ನೆಲ್ಲ ನೋಡಿ ಇವನು ನನ್ನ ಶತೃ ಎನ್ನುವಷ್ಟರ ಮಟ್ಟಿಗೆ ನಿನ್ನ ಮನಸ್ಸು ಪರಿವರ್ತನೆಯಾಗುವುದೆಂದು ನನಗೆ ಬುದ್ಧಿ ಹೇಳಿದರು. ಅದಕ್ಕೆ ನಾನು, ಇಲ್ಲ ಸಾರ್ ನೀವು ಯೋಚಿಸಿರುವಂತಹ ರೀತಿ ತಪ್ಪಾಗಿದೆ. ಇಂತಹ ಮಹಿಳಾ ಸಂಘಟನೆಗೆ ಸೇರಿದ ಸ್ತ್ರೀಯರೆಲ್ಲರೂ ಗಂಡಸರನ್ನು ದ್ವೇಷಿಸುವುದಾಗಲೀ ಅಥವಾ ಅವರನ್ನೂ ಶತೃಗಳೆಂದು ಭಾವಿಸುವುದಾಗಲೀ ನಡೆಯುವುದಿಲ್ಲ ಬದಲಿಗೆ ಹೊರಗಿನ ಪ್ರಪಂಚ ದ ನೊಂದ ಹೆಣ್ಣು ಮಕ್ಕಳ, ತಾಯಿ, ಅಕ್ಕ, ತಂಗಿರ ಕಥೆಗಳನ್ನು (ನೋವಿನಿಂದ ಕೂಡಿದ) ತಿಳಿದು ಅದಕ್ಕೆ ಪರಿಹಾರ ಹುಡುಕುವ ಮನೋಭಾವ ಬರುವುದೆಂದು ತಿಳಿಸಿದೆ. ನಂತರ ನಾನು ಸಾರ್ ನೀವು ತುಂಬ ಕಥೆ, ಕಾದಂಬರಿ ಬರೆಯುತ್ತಿರಲ್ಲ ನಮ್ಮ ಮಾನಸಕ್ಕೂ ಬರೆಯಿರಿ ಎಂದು ಕೇಳಿದೆ ಅದಕ್ಕೆ ಅವರು ಸಂತೋಷದಿಂದ ಒಪ್ಪಿದರು. ಆದರೆ ನಮ್ಮ ಪತ್ರಿಕೆಯನ್ನು ಓದಲು ವಿರೋಧಿಸಿದರು. ಅವರು ಬರೆದ ಕಥೆಯನ್ನು ಮಾತ್ರ ನಾವು ಪ್ರಕಟಿಸಬಹುದು. ಆದರೆ ಇದು ಅವರಲ್ಲಿ ಭಯವನ್ನುಂಟು ಮಾಡುವ ಮಾಧ್ಯಮವಾಗಿದೆ. ಇದು ಎಷ್ಟು ಜೋಕಾಗಿದೆ ಅಲ್ಲವೆ?

ಓದುಗರ ಅನಿಸಿಕೆಗಳು

ನನ್ನ ಕಥೆ ನಮ್ಮ ಕಥೆ

ಫ್ಲೇವಿಯಾರವರ 'ನನ್ನ ಕಥೆ- ನಮ್ಮ ಕಥೆ' ಪುಸ್ತಕವನ್ನು ಮಾನಸದ ಹಲವಾರು ಗೆಳತಿಯರು ಓದಿದಾಗ ಪ್ರತಿಯೊಬ್ಬರಿಗೂ ಹಂಚಿಕೊಳ್ಳಲು ತಮ್ಮದೇ ಆದ ಅನಿಸಿಕೆಗಳಿಗದ್ದವು. ಮಾತು ಕತೆಗಳಲ್ಲಿ ವ್ಯಕ್ತವಾಗುತ್ತಿದ್ದ ಈ ಅನಿಸಿಕೆಗಳನ್ನು ಬರವಣಿಗೆಯ ರೂಪದಲ್ಲಿ ಬರೆದುಕೊಡಿ ಎಂದು ಕೇಳಿದಾಗ ಪುಸ್ತಕ ಓದಿದವರೆಲ್ಲಾ ಸಹಕರಿಸಿ ಬರೆದು ಕೊಟ್ಟರು. ಕೌಟುಂಬಿಕ ಹಿಂಸೆಯ ವಿವಿಧ ಸ್ವರೂಪವನ್ನು ನೇರವಾಗಿ ಬಿಚ್ಚಿಡುವ ಈ ಪುಸ್ತಕ ಮಹಿಳಾ ಚಳುವಳಿಯ ವಿಶಿಷ್ಟ ಕೊಡುಗೆ. ಈ ಪುಸ್ತಕವನ್ನು ಓದಿದ ಮಹಿಳೆಯರ ಅನಿಸಿಕೆಗಳನ್ನು ದಾಖಲು ಮಾಡಬೇಕೆಂಬ ಉದ್ದೇಶದಿಂದ ಮೊದಲ ಕಂತಿನಲ್ಲಿ ಹಲವರ ಅನಿಸಿಕೆಗಳನ್ನು ಪ್ರಕಟಿಸಿದ್ದೇವೆ.

ಫ್ಲೇವಿಯರವರ ಕಥೆ ಓದಿದ್ದರಿಂದ ನನಗೆ ತುಂಬಾ ಮೆಚ್ಚುಗೆ ಆಯಿತು, ಏಕೆಂದರೆ ಅವರ ಜೀವನದಲ್ಲಿ ಎಂತಹ ಘಟನೆಯನ್ನು ಎದುರಿಸಿದ್ದಾರೆ ಅವರು ನಮ್ಮ ಮಹಿಳೆಯರಿಗೆ ಕೀರ್ತಿಯನ್ನು ತಂದು ಕೊಟ್ಟಿದ್ದಾರೆ. ಅವರಂತೆಯೇ ಎಲ್ಲಾ ಮಹಿಳೆಯರು ಈ ಶತಮಾನದಲ್ಲಿ ಇರುವ ಸಮಸ್ಯೆಗಳನ್ನು ಇವರಂತೆ ಎದುರಿಸಬೇಕು.

- ರಾಜೇಶ್ವರಿ ಎ.

ನನ್ನ ಕಥೆ ನಮ್ಮ ಕಥೆ ಫ್ಲೇವಿಯರವರ ಜೀವನ ಕಥೆ. ಸಮಾಜದಲ್ಲಿ ಧೈರ್ಯ ಸ್ವಾಭಿಮಾನ ಹೊಂದಿರುವಂತಹ ಸ್ತ್ರೀಯರ ಬದುಕು ದುರಂತಮಯ. ಆದರೆ ಫ್ಲೇವಿಯಾ ದುರಂತ ಮಾಯವಾಗಬಹುದಾದ ಬದುಕನ್ನು ಹೋರಾಟದ ಕೆಚ್ಚಿನಿಂದ ಜೀವಂತವಾಗಿಸಿದ್ದಾರೆ. ಹೆಣ್ಣು ಗಂಡ ಕಾರಣವಿಲ್ಲದೆ ಬೈದರೆ, ಹೊಡೆದರೆ, ಹೀಯಾಳಿಸಿದರೆ ಇನ್ನು ಇತರೆ ಏನೇ ಅವಮಾನಿಸಿದರೂ ಮರೆತು ಹೊರಗಿನಿಂದ ಬರುವ ಗಂಡನಿಗೆ ನಗುನಗುತ ಸ್ವಾಗತಿಸಬೇಕು. ಸ್ವಾಭಿಮಾನಿಯಾದ ಹೆಣ್ಣಿಗೆ ಇದು ಸಾಧ್ಯವೇ?

ಫ್ಲೇವಿಯಾ ಅಲ್ಪಸ್ವಲ್ಪ ಓದಿದ ಮೃದುಸ್ವಾಭಾವದ ಹೆಣ್ಣಾದರೂ ಸ್ವಾಭಿಮಾನ ಅವರಲ್ಲಿ ಇದ್ದ ಕಾರಣ ಅವರು ಸುಸಂಸ್ಕೃತ ನೆನೆಸಿಕೊಂಡ ಗಂಡನ ಕೈಯಲ್ಲಿ ಯಾವ ತಪ್ಪು ಮಾಡದಿದ್ದರು ಪದೇ ಪದೇ ಹೊಡೆತಕ್ಕೆ ಒಳಗಾಗುತ್ತಾ ಬರುತ್ತಾರೆ. ಅವರ ತುಂಬು ಯೌವನದ ಲವಲವಿಕೆಯ ಬದುಕು ಜಾರಿ ಹೋಗುತ್ತದೆ.

ಆ ನಡುವಿನ ಅವರ ಹೊಯ್ದಾಟ ನೋವು ದುಃಖ ಅವಮಾನ ಮಾನಸಿಕ ವೇದನೆ ಇವುಗಳ ನಡುವೆ ತನ್ನ ಮೈ ಮನಸುಗಳಿಗೆ ನೋವುಣಿಸಿದವನಿಗೆ ಅದೆ ಮೈಯನ್ನು ಕೊಟ್ಟು ಅವನಿಗೆ ಸುಖ ಉಣಿಸಬೇಕಾಗುತ್ತದೆ. ಇದು ಯಾವ ಹೆಣ್ಣಿಗಾದರೂ ಅಸಾಧ್ಯವೇ. ಇನ್ನು ಸ್ವಾಭಿಮಾನ ಇರುವ ಹೆಣ್ಣಿಗೆ ಇದು ಸಾಧ್ಯವೇ? ಗಂಡು ಏಕೆ ಈ ಸತ್ಯವನ್ನು ಅರಿಯುವುದಿಲ್ಲ. ಕೋಮು ಗಲಭೆಯಾದರೆ ಜನ ಬೆಚ್ಚುತ್ತಾರೆ. ಎಲ್ಲಿಯೋ ದರೋಡೆಯಾದರೆ ಅಲ್ಲಿ ಬೆವರುತ್ತಾರೆ. ಏಡ್ಸ್ ಎಂದರೆ ಮೂರ್ಛೆ ಹೋಗುತ್ತಾರೆ. ಅದೇ ಹೆಣ್ಣುಗಳ ಮೈ ಮನಸ್ಸು ದೇಹಗಳು ಮಾರಣ ಹೋಮದಲ್ಲಿ ಬೆಂದು ಹೋಗುತ್ತಿದ್ದರು ಸಹಿಸಿಕೊಳ್ಳುತ್ತಾರೆ.

ಫ್ಲೇವಿಯಾರವರ ಜೀವನದಲ್ಲಿ ಅವರ ತಾಯಿಯ ಪಾತ್ರ ಮಹತ್ತರವಾದದು. ಅವರು ತಾಯಿ ಮಗಳು ನೊಂದು ದಿಕ್ಕೆಟ್ಟಾಗ ಆತ್ಮವಿಶ್ವಾಸವನ್ನು ತುಂಬುತ್ತಾರೆ. ಗಂಡನನ್ನು ಬಿಡುವುದೆಂದು ತೀರ್ಮಾನಿಸಿ ತಾಯಿಯ ಸಲಹೆಯನ್ನು ಕೇಳಿದಾಗ ನೀನು ಯಾವ ನಿರ್ಧಾರವನ್ನು ತೆಗೆದುಕೊಂಡರು ಸರಿಯಾಗಿ ಯೋಚಿಸಿ ಕೈಗೊಳ್ಳುವೆ. ನಿನಗೆ ನಿನ್ನ ಗಂಡನ ಜೊತೆಗೆ ಬದುಕುವುದ ಕಷ್ಟವಾದರೆ ನೀನು ಯಾವಾಗ ಬೇಕಿದ್ದರು ನನ್ನ ಮನೆಗೆ ಬಂದುಬಿಡು ಎಂದು ತುಂಬು ಮನಸ್ಸಿನ ಸ್ವಾಗತ ನೀಡುತ್ತಾರೆ. ಈ ತರಹದ ತಾಯಂದಿರು ಎಷ್ಟು ಮಂದಿಯಿರಬಹುದು?

ಗಂಡನನ್ನು ಬಿಟ್ಟುಬರಲು ಯಾರಿಗೆ ಇಷ್ಟವಾಗುತ್ತದೆ? ಒಳ್ಳೆಯ ಗಂಡನಿದ್ದು ಸುಂದರ ಜೀವನವನ್ನು ಯಾವ ಮೂರ್ಖ ಹೆಣ್ಣು ತ್ಯಜಿಸುವುದಿಲ್ಲ. ತನಗೆ ಅಸಾಧ್ಯವಾದಾಗ ಮಾತ್ರ ಹೆಣ್ಣು ಗಂಡನನ್ನು ಬಿಟ್ಟು ಬರುತ್ತಾಳೆ. ಬರುವ ಮೊದಲು ಅವಳು ಗಂಡನನ್ನು ಬಿಟ್ಟ ಬದುಕು ಹೇಗಿರುತ್ತದೆ ಎಂದು ಯೋಚಿಸಿ ಆ ಬದುಕಿನಲ್ಲಿಯೂ ನೋವಿರುವುದನ್ನು ಅರಿತು, ಎರಡನೆಯದಕ್ಕಿಂತ ಮೊದಲನೆಯದು ಸಹಿಸಲು ಅಸಾಧ್ಯವಾದಾಗ ವಿಧಿ ಇಲ್ಲದೆ ಗಂಡನನ್ನು ಬಿಟ್ಟು ಬರುತ್ತಾರೆ. ಆಗ ಎಷ್ಟು ತಾಯಂದಿರು ಈ ಬಗೆಯ ಸ್ವಾಗತವನ್ನು ನೀಡುತ್ತಾರೆ. ಫ್ಲೇವಿಯಾರವರಿಗೆ ಅವರ ತಾಯಿ ಆರ್ಥಿಕವಾಗಿ ನೆರವಾಗುತ್ತಾರೆ. ನೊಂದ ಹೆಣ್ಣಿಗೆ ಬೇಕಾದ ಮೊದಲ ಚಿಕಿತ್ಸೆ ಅದೇ. ಆದಕಾರಣ ಫ್ಲೇವಿಯಾರವರು ಬಾಂಬೆಯಂತಹ ದೊಡ್ಡ ನಗರದಲ್ಲಿ ಇರಲು ಗೆಳತಿಯರ

ಮನೆಯಲ್ಲಿ ಇದ್ದು ಅವರು ಸ್ವಾವಲಂಬಿಯಾಗಿ ಬದುಕಲು ಪ್ರಯತ್ನಿಸುತ್ತಾರೆ. ಇಲ್ಲಿ ಗೆಳತಿಯರ ಸಮಾಜ ಸೇವಕಿಯರ ಪಾತ್ರವು ಮುಖ್ಯವಾದುದು. ಅಂದು ಅವರು ಫ್ಲೇವಿಯಾರವರಿಗೆ ಸಹಾಯ ಹಸ್ತವನ್ನು ನೀಡಿದ್ದರಿಂದ ಸ್ವಾಭಿಮಾನವನ್ನು ಉಳಿಸಿಕೊಂಡು ಅವರು ಅಂದುಕೊಂಡ ಹಾಗೆ ಗುರಿ ಮುಟ್ಟಲು ಸಾಧ್ಯವಾಯಿತು. ಫ್ಲೇವಿಯರವರ ಧೈರ್ಯದ ಜೊತೆಗೆ ಅವರ ತಾಯಿಯ ಸಮರ್ಪಕವಾದ ತೀರ್ಮಾನ ಹಾಗೂ ಸಮಾಜ ಸೇವಕಿಯರ ಸಹಕಾರಗಳು ಅತಿ ಮುಖ್ಯವಾದ ಪಾತ್ರಗಳಾಗಿವೆ. ಈ ಪಾತ್ರಗಳು ನೊಂದು ದಿಕ್ಕುಗೆಟ್ಟ ಹೆಣ್ಣು ಮಕ್ಕಳಿಗೆ ಚುಕ್ಕಾಣಿ ಇದ್ದಂತೆ. ಅವರನ್ನು ಮುಳುಗಿಸದೆ ದಡಸೇರಲು ಸಹಕರಿಸುತ್ತದೆ.

- ಜಿ. ವಿ. ವೇದವಲ್ಲಿ

ಫ್ಲೇವಿಯಾರವರ ಜೀವನ ಕಥೆಯನ್ನು ಓದಿದಾಗ ಹಿಂದಿನ ನಾಣ್ಣುಡಿಯಾದ ಎಲ್ಲಿ ಸ್ತ್ರೀಯನ್ನು ಪೂಜಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂಬ ಮಾತು ಇದಕ್ಕೆ ವಿರುದ್ಧ ಎಂದು ಭಾಸವಾಗುತ್ತದೆ. ಏಕೆಂದರೆ ಅವರು ಪಟ್ಟ ಕಷ್ಟ ಮಕ್ಕಳಿಗೆ ಬಂದ ತೊಂದರೆಗಳು ಇವೆಲ್ಲವನ್ನೂ ಸಹಿಸಿ ಅವರು ಮೇಲೇರಿದ್ದು ಬಹಳವೇ ಸಾಹಸ ಕಥೆಯಾಗಿದೆ. ಆದರೆ ಕಾನೂನು ಹೆಣ್ಣಿಗೆ ಬಲವನ್ನು ಕೊಡದೇ ಇರುವುದು, ಮಕ್ಕಳು ತಂದೆಯಿಂದ ಪಟ್ಟಕಷ್ಟ ಆದರೂ ತಾಯಿಗೆ ತಮ್ಮ ಬೆಂಬಲ ನೀಡಿದ್ದು ಇವೆಲ್ಲ ಅವರ ಮುನ್ನಡೆಗೆ ದಾರಿಯಾಯಿತು.

- ಎಂ. ಎಸ್. ನಾಗರತ್ನ

ಈ ಆತ್ಮಕಥೆಯಲ್ಲಿ ಫ್ಲೇವಿಯಾರವರು ಜೀವನದಲ್ಲಿ ತುಂಬಾ ಆಸೆ-ಆಕಾಂಕ್ಷೆಯನ್ನು ಹೊಂದಿದ್ದು ಅವರು ಮದುವೆಯ ನಂತರ ಆಸೆ-ಆಕಾಂಕ್ಷೆಗಳೆಲ್ಲವೂ ಬರಿ ಕನಸಾಗಿಯೇ ಉಳಿಯುತ್ತವೆ. ಕಾರಣ ಅವರು ಬರೆದಿರುವಂತೆ ಅವರ ಗಂಡ ಅವರನ್ನು ಸುಮ್ಮ ಸುಮ್ಮನೆಯಾದರು ಕುಡಿದು ಬಂದು ದಂಡಿಸುತ್ತಿದ್ದದ್ದು. ಇದು ಎಲ್ಲಿಯವರೆಗೂ ಇತ್ತು ಎಂದರೆ ಅವರ ಮಕ್ಕಳು 10-12 ವರ್ಷದವರಾಗುವವರೆಗಿತ್ತು. ನಂತರ ಅವರು ಗಂಡನನ್ನು ತ್ಯಜಿಸಿದರು. ನಂತರ ಆಕೆ ಇನ್ನು ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅದು ಅವರು ಎಲ್ಲಿಯಾದರು ಕೆಲಸಕ್ಕೆ ಸೇರೋಣ ಎಂದರೆ ಬರಿ ಎಸ್.ಎಸ್.ಎಲ್.ಸಿ.ಯನ್ನು ಮಾತ್ರ ಮುಗಿಸಿದ್ದರು. ಆದರೂ ಆಕೆ ಎಲ್ಲ ಸಮಸ್ಯೆಯನ್ನು ಎದುರಿಸಿ ಮುಂದೆ ಬಂದರು.

ಇಲ್ಲಿ ನನಗೆ ಇಷ್ಟವಾದ ಮತ್ತೊಂದು ಅಂಶವೆಂದರೆ, ಫ್ಲೇವಿಯಾರವರು ಮುಂದೆ ಬರಲು ಅವಳ ಸ್ನೇಹಿತೆಯರು ಹಾಗೂ ಕೆಲವೊಂದು ಮಹಿಳಾ ಸಂಘಗಳೇ ಆಗಿದೆ. ಅವರ ಜೀವನ ಒಡೆದು ಹೋದ ಗಾಜಿನಂತಿದ್ದು ಅದನ್ನು ಈ ಮಹಿಳಾ ಗುಂಪುಗಳು ಒಂದು ನಿರ್ದಿಷ್ಟ ಆಕಾರ ನೀಡಿ ಜೀವ ತುಂಬಿದಂತೆ ಇವರ ಜೀವನದಲ್ಲಿ ಉತ್ಸಾಹ ಮೂಡಲು ಕಾರಣರಾಗಿದ್ದಾರೆ. ಹೆಣ್ಣಿಗೆ ಹೆಣ್ಣು ಶತ್ರು ಎಂಬುದು ಸುಳ್ಳು ಎಂಬುದನ್ನು ಇಲ್ಲಿ ನಾವು ಮನದಟ್ಟು ಮಾಡಿಕೊಳ್ಳಬಹುದು. ಈ ರೀತಿ ಮಹಿಳಾ ಸಂಘದವರು ಮತ್ತು ಸ್ನೇಹಿತೆಯರು ಹಾಗೂ ಆಕೆಯ ತಾಯಿಯ ನೆರವು ಇಲ್ಲದಿದ್ದರೆ ಈಕೆಯ ಜೀವನ ಪೂರ್ತಿಯಾಗಿ ಒಡೆದ ಗಾಜಿನಂತೆ ಚೂರು ಚೂರಾಗಿ ಬಾಳಬೇಕಾಗಿತ್ತು. ಮುಂದೆ ಈಕೆ ಸಮಾಜದಲ್ಲಿ ಒಬ್ಬ ದೊಡ್ಡ ನ್ಯಾಯಾಧೀಶರು ಎನ್ನಿಸಿ ಕೊಳ್ಳುತ್ತಿರಲಿಲ್ಲ. ಆಕೆ ಇತರ ಸ್ತ್ರೀಯರಿಗೆ ಆಶ್ರಯದಾತರು ಮತ್ತು ಮಾರ್ಗದರ್ಶಿಗಳು ಆಗುತ್ತಿರಲಿಲ್ಲ.

ಮತ್ತೊಂದು ಅಂಶವೆಂದರೆ ಅವರ ಮಗ ವಿಕ್ರಂನ ಪಾತ್ರವು ನನಗೆ ತುಂಬಾ ಹಿಡಿಸಿದ ಪಾತ್ರವಾಗಿದೆ. ಇಲ್ಲಿ ಅವರ ತಂದೆ-ತಾಯಿ ಬೇರೆಯಾದಾಗ ಅವನ ತಾಯಿಯ ಆರ್ಥಿಕ ಮುಗ್ಗಟ್ಟನ್ನು ಮನದಟ್ಟು ಮಾಡಿಕೊಂಡು ತಂದೆಯ ಜೊತೆಯಲ್ಲಿಯೇ ಇರಲು ಒಪ್ಪಿದ್ದು ಮತ್ತು ತಂದೆಯು ನೀಡಿದ ತೊಂದರೆಗಳೆಲ್ಲವನ್ನು ಸಹಿಸಿಕೊಂಡು ಮುಂದೆ ಇಂತಹ ಸನ್ನಿವೇಶದಲ್ಲಿಯೇ ಅವನು ತನ್ನ ಪದವಿ ಪೂರ್ತಿ ಮಾಡಿ ಒಳ್ಳೆಯ ಕೆಲಸಕ್ಕೆ ಸೇರಿದ್ದು ನಿಜವಾಗಿಯೂ ಮೆಚ್ಚುವಂತಹ ಅವನ ತಾಳ್ಮೆ, ಸಹನೆ, ಜಾಣ್ಮೆಯಾಗಿದೆ.

ಫ್ಲೇವಿಯರವರು ಮುಂದೆ ಅಂದರೆ ಗಂಡನಿಂದ ದೂರವಾಗಿ ಸಮಾಜದಲ್ಲಿ ಏನೇ ತೊಂದರೆ ಕಷ್ಟ ಬಂದರು ಕಲ್ಲಿನ ಬಂಡೆಯಂತೆ ಎಲ್ಲವನ್ನೂ ಸಹಿಸಿಕೊಂಡು ಮುಂದೆ ಒಳ್ಳೆಯ ವಕೀಲರು ಮತ್ತು ರಾಷ್ಟ್ರಮಟ್ಟದಲ್ಲಿ ಉನ್ನತ ಹೆಸರು ಪಡೆಯುತ್ತಾರೆ. ಹಾಗೂ ತನ್ನ ಎರಡು ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸಿ ಅವರ ಭವಿಷ್ಯವು ಸುಖವಾಗಿರುವಂತೆ ಮಾಡುತ್ತಾರೆ ಮುಂದೆ ತನ್ನ ಮಗನನ್ನು ತನ್ನೊಂದಿಗೆ ಬಂದಿರಲು ತಿಳಿಸುತ್ತಾರೆ.

ಹೀಗೆ ಅವರ ಸಾಹಸಮಯ ಹಾಗೂ ದುಃಖಪೂರ್ಣವಾದ ಆತ್ಮಕಥೆಯು ಇತರ ದುಃಖಿತರಾಗಿರುವ ಇವರಂತೆ ಗಂಡಿನ ದೌರ್ಜನ್ಯಕ್ಕೆ, ದಬ್ಬಾಳಿಕೆಗೆ ಒಳಗಾಗಿರುವ ಹೆಣ್ಣುಗಳು ಮುಂದೆ ಬೆಳಕಿಗೆ ಬರಲು ಮಾರ್ಗದರ್ಶನವಾಗಿದೆ ಎನ್ನಬಹುದು.

- ಲಕ್ಷ್ಮೀ ಎ.

ಬದಲಾಗುತ್ತಿರುವ ನಮ್ಮ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿಗಿರುವ ಸಮಸ್ಯೆಗಳು

○ ಎಸ್. ಎಸ್. ಶ್ರೀಮತಿ

ಒಂದು ಕಾಲಕ್ಕೆ ತಮ್ಮ ಆಹಾರದ ಅಗತ್ಯಗಳಿಗಾಗಿ ಮನುಷ್ಯರೂ ಕೂಡ ಗುಂಪುಗಳಾಗಿ ಅಲೆದಾಡುತ್ತಿದ್ದರಂತೆ. ಆಮೇಲೆ ಬೇಸಾಯದ ತಿಳಿವು ಬಂತು. ಇದರೊಂದಿಗೆ ಒಂದು ಕಡೆ ನೆಲೆ ನಿಲ್ಲುವ ಅಗತ್ಯ ಕಂಡಿತು. ಬೇಸಾಯದಿಂದ ಆಹಾರದ ಉತ್ಪಾದನೆಗೆ ತೊಡಗಿದ ಮೇಲೂ ಭೇಟೆಯಾಡಿ ಆಹಾರ ಸಂಗ್ರಹಿಸುವುದೂ ನಡೆದಿತ್ತು. ಆಗ ಮನೆಯ ಆವರಣದಲ್ಲಿನ ಕೆಲಸಗಳು ಹಾಗೂ ಹೊರಗಿನ ಕೆಲಸಗಳು ಎಂದು ಶ್ರಮ ವಿಭಜನೆಯ ಅಗತ್ಯವಾಯಿತು. ಹೆರಿಗೆ, ಬಾಣಂತನ, ಮಕ್ಕಳು ಮರಿಗಳ ಸಂಗೋಪನೆಗಳಂತಹ ನೈಸರ್ಗಿಕ ಕರ್ತವ್ಯಗಳಿದ್ದ ಹೆಂಗಸು ಸಹಜವಾಗಿ ಮನೆಯಲ್ಲಿ ನಿಂತರೆ, ಇಂಥಾ ಈತಿಬಾಧೆಗಳಿಲ್ಲದ ಗಂಡಸು ಅಲೆಮಾರಿತನವನ್ನು ಮುಂದುವರೆಸಿದ. ಆಹಾರ ಉತ್ಪಾದನೆಯೊಂದಿಗೆ ಶೇಖರಣೆ ಸಾಧ್ಯವಾದಾಗ ಅದರ ಮೇಲಿನ ಹಕ್ಕಿನ ಪ್ರಶ್ನೆ ಹುಟ್ಟಿದ್ದು, ಕ್ರಮೇಣವಾಗಿ ಜಮೀನು, ಬೆಳೆ, ಮನೆ, ಹೆಚ್ಚುವರಿ ಆಹಾರ ಸಂಗ್ರಹಗಳ ಮೇಲೆ ಮಾತ್ರವೇ ಅಲ್ಲದೆ ಮನೆಯೊಳಗಿನ ಸದಸ್ಯರ ಮೇಲೂ ಹಕ್ಕು ಸ್ಥಾಪನೆಯನ್ನು ಸಾಧಿಸುವ ಪರಿಪಾಠ ಬೆಳೆಯಿತು. ಶ್ರಮ ವಿಭಜನೆಯನ್ನು ಸೇವೆಯ ಕೆಲಸಗಳು ಹೆಣ್ಣಿಗೆ, ಉತ್ಪಾದನೆಯ ಕೆಲಸಗಳು ಗಂಡಿಗೆ ಎಂದು ಸರಳವಾಗಿಯೇ ನಿರ್ಧಾರವಾದಂತಿದ್ದರೂ ಉತ್ಪಾದನಾ ವಿಭಾಗ ತರುವ 'ಗಳಿಕೆ'ಯಿಂದಾಗಿ ಬಲುಬೇಗನೆ 'ಮನೆ'ಯ ಮೇಲಿನ ಸಂಪೂರ್ಣ ಹಕ್ಕು ಗಂಡಿನ ಹಿಡಿತಕ್ಕೆ ದಕ್ಕಿಹೋಯಿತು. ಈಗ 'ಮನೆ' ಹಾಗೂ ಅದರ ಸದಸ್ಯರು ಗಂಡಿನ 'ಸಂಪತ್ತು' ಎನಿಸಿದವು. ಅದು ಅವನ 'ಕುಟುಂಬ'ವೆನಿಸಿತು. ಅವನು ಯಜಮಾನನಾಗಿರುವ ಕುಟುಂಬದ ಸದಸ್ಯರ ಸ್ಥಾನಮಾನಗಳನ್ನು ನಿರ್ಧರಿಸುವ ನಿರ್ಣಾಯಕ ಸಂಗತಿಗಳಾಗಿ ಅಲ್ಲಿನ ಸದಸ್ಯರ ಪರಸ್ಪರ ಸಂಬಂಧಗಳನ್ನು ಕಲ್ಪಿಸಿ ಅವರವರ ಹಕ್ಕುಬಾಧ್ಯತೆಗಳನ್ನು ಕಾಲಕಾಲಕ್ಕೆ ಸೂಚಿಸುತ್ತಾ ಆ ಯಜಮಾನ ತನ್ನ ಕುಟುಂಬವನ್ನು ನಡೆಸುತ್ತಾ ಬಂದಿರುವುದೇ ಈಗಲೂ ಮುಂದುವರೆದಿರುವ ನಮ್ಮೆಲ್ಲರ ಕತೆ.

ವಿವಾಹದಂತಹ ಸಂಸ್ಥೆಯನ್ನು ಸೃಷ್ಟಿಸಿಕೊಂಡು ಕುಟುಂಬಗಳು ಪರಸ್ಪರ ಹಲವು ಕೊಳುಕೊಡೆಗಳಲ್ಲಿ ಸಮಾಜಗಳಾಗಿ ಬೆಳೆದು ಬಹುರೂಪಗಳಲ್ಲಿ ವಿಸ್ತಾರಿಸಿದವು. ನಿರಂತರವಾಗಿ ನಡೆಯುತ್ತಲೇ ಹೋಗುವ ಈ ಬೆಳವಣಿಗೆ ಹಲವು ರೂಪಗಳಲ್ಲಿ ಕುಟುಂಬಗಳ ಹಾಗೂ ಅಲ್ಲಿನ ಸದಸ್ಯರ ಸ್ಥಿತಿಗತಿಗಳಲ್ಲಿ ಬದಲಾವಣೆಗಳನ್ನು ತರುತ್ತಲೇ ಇರುತ್ತದೆ. ನಾಗರಿಕತೆಯ ಬೆಳವಣಿಗೆಯೊಂದಿಗೆ ನಮ್ಮೆಲ್ಲರ ಜೀವನಗಳು ಹೆಣೆದುಕೊಂಡು ಬಿಟ್ಟಿವೆ. ಬರಬರುತ್ತಾ ಇಡೀ ಪ್ರಪಂಚದ ಆಗುಹೋಗುಗಳಾವುದನ್ನು ನಮಗೆ ಸಂಬಂಧವಿಲ್ಲದ್ದು ಎಂದು ಪಕ್ಕಕ್ಕಿಡಲಾರದ ಸ್ಥಿತಿಯಲ್ಲಿ ನಾವೀಗ ಇದ್ದೇವೆ. ಪ್ರಪಂಚದ ಯಾವುದೋ ಒಂದು ಪ್ರಬಲ ರಾಷ್ಟ್ರದಲ್ಲಿ ಯಾರೋ ಕೆಲವರು ತೆಗೆದುಕೊಂಡ ನಿರ್ಧಾರಗಳು ನಮ್ಮ ಬದುಕನ್ನು ಅಲ್ಲಾಡಿಸುವಂಥವಾಗಬಹುದು. ಮೊದಲಾದರೆ ನಮಗೆ ಅನಿಷ್ಟವಾಗಿ, ಅನಗತ್ಯವಾಗಿ ಕಂಡ ಯಾವುದೇ ಸಂಗತಿಗಳಿಂದ ನಾವು ದೂರದಲ್ಲಿದ್ದು ಬಿಟ್ಟರೆ ಅದರ ಕೆಟ್ಟ ಪರಿಣಾಮಗಳಿಂದಲೂ ನಾವು ದೂರವಾಗಿದ್ದು ಬಿಡುವುದು ಸಾಧ್ಯವಾಗುತ್ತಿತ್ತು. ಈಗ ಪ್ರಪಂಚ ತುಂಬಾ ಚಿಕ್ಕದಾಗುತ್ತಿದೆ. ಎಲ್ಲೋ ನಡೆದ ಯುದ್ಧ, ಯಾರೋ ಮಾಡಿದ ಅಪರಾಧ, ಇನ್ನೆಲ್ಲೋ ನಡೆದ ತಪ್ಪುಗಳ ಪಾಪಗಳ ಹೊರೆ ಮತ್ತು ಪರಿಣಾಮಗಳನ್ನು ಅವಾವುದಕ್ಕೂ ಸಂಬಂಧಿಸಿಯೇ ಇರದಿದ್ದರೂ ನಾವೆಲ್ಲರೂ ಅನುಭವಿಸಬೇಕು. 'ಕುಟುಂಬ'ದ ಹುಟ್ಟಿನ ಮೂಲದಲ್ಲೇ ಯಾಜಮಾನ್ಯದ ಕಲ್ಪನೆ, ಉಳಿದವರನ್ನು ಹಿಡಿತದಲ್ಲಿಟ್ಟುಕೊಳ್ಳುವ ಕ್ರೂರ ಭಾವನೆಗಳು ಇವೆಯಾದರೂ, ಶತಮಾನಗಳಿಂದ ರೂಢಿಗೆ ಬಿದ್ದಿರುವ ಈ ಕುಟುಂಬ ವ್ಯವಸ್ಥೆ ಹಲವು ವಿಧಗಳಲ್ಲಿ ವ್ಯಕ್ತಿಗಳ ಸೌಖ್ಯ, ಸಂರಕ್ಷಣೆಗಳನ್ನೂ ವಹಿಸಿಕೊಂಡಿದೆ. ಜಾಗತೀಕರಣದ ಹಲವು ಸಂಗತಿಗಳು ಒಡ್ಡುತ್ತಿರುವ ಸವಾಲುಗಳನ್ನು ಒಂಟೊಂಟಿಯಾಗಿ ಎದುರಿಸುವುದು ಅಸಾಧ್ಯವಾಗುತ್ತಿರುವ ಕಾಲಹಂತದಲ್ಲಿರುವ ನಾವುಗಳು ಹಿಂದೆಂದಿಗಿಂತಲೂ ಹೆಚ್ಚಾಗಿ ಪರಸ್ಪರ ಅವಲಂಬಿತರಾಗಿದ್ದೇವೆ. ಆದರೆ, ಅದೇ ಜಾಗತೀಕರಣದ ಕಾರಣವಾಗಿಯೇ ಕುಟುಂಬಗಳು ವ್ಯತ್ಯಯಗೊಳ್ಳುತ್ತಾ, ಛಿದ್ರಗೊಳ್ಳುತ್ತಾ ನಡೆದಿರುವಾಗ ಅವು ವ್ಯಕ್ತಿಗಳಿಗೆ ಈ ಮೊದಲಿನಷ್ಟಾದರೂ ಕೂಡ ಒತ್ತಾಸೆಯಾಗಿ ನಿಲ್ಲಬಲ್ಲವೇ ಎಂಬ ಅನುಮಾನಗಳೂ ಬರುತ್ತಿವೆ. ಅದರಲ್ಲೂ ಯಜಮಾನನಾದ ಗಂಡಸಿನ ಅಧಿಕಾರದಿಂದಾಗಿ ಈ ಮೊದಲು ಕೂಡ ಅತ್ಯಂತ ಹೀನಾಯ ಬದುಕಿಗೆ ಬಿದ್ದಿದ್ದ ಹೆಂಗಸರ ಸ್ಥಿತಿಗತಿಗಳಂತೂ ಬದಲಾದ ಜಾಗತಿಕ ಪರಿಸ್ಥಿತಿಗಳಲ್ಲಿ ಇನ್ನಷ್ಟು ಭಯಾನಕ ವಾಗುತ್ತಿರುವಂತಿದ್ದ ಕುಟುಂಬಗಳು ವಿಘಲನೆಗೊಳ್ಳುತ್ತಾ ಚಿಕ್ಕ ಚಿಕ್ಕ ಘಟಕಗಳಾಗಿ ರೂಪುಗೊಳ್ಳುತ್ತಾ ಹೆಚ್ಚುಹೆಚ್ಚು ವ್ಯಕ್ತಿ ಕೇಂದ್ರಿತವಾಗುತ್ತಿವೆ ಎಂಬ ಸಂದರ್ಭ ಮೇಲುನೋಟಕ್ಕೆ ಹೆಚ್ಚಿನ ಸುಖವನ್ನೇ ತಂದಂತೆ ತೋರುತ್ತದೆ. ನಮ್ಮ ಜೀವನ ಮಟ್ಟಗಳು ಮೇಲೇರುತ್ತಿರುವಂತಿದೆ. ಈ ಹಿಂದೆ

ಕನಸಿನಲ್ಲೂ ಕಲ್ಪಿಸಲು ಸಾಧ್ಯವಿಲ್ಲದಿದ್ದ ಐಹಿಕ ವೈಭೋಗಗಳು ಮಧ್ಯಮ ವರ್ಗದ ಕುಟುಂಬಗಳ ಕೈಗೆ ಎಟುಕುವಂತಾಗಿದೆ. ಶಿಕ್ಷಣ, ನೌಕರಿಗಳಂತಹ ಅವಕಾಶಗಳು ಮಹಿಳೆಯರಿಗೆ ದಕ್ಕುತ್ತಿದೆ ಎಂಬುದರಿಂದಂತೂ ಮಧ್ಯಮ ಹಾಗೂ ಮೇಲು ವರ್ಗದ ಮಹಿಳೆಯರು ಪುರುಷರ ಸರಿಸಾಟಿಯಾಗಿ ನಿಂತುಬಿಟ್ಟಿದ್ದಾರೆಂಬ ಭ್ರಮೆಯೇ ಹರಡಿಬಿಟ್ಟಿದೆ. ಆದರೆ ಹೊಸ ಪರಿಸ್ಥಿತಿಯಲ್ಲಿ ಹೆಂಗಸರ ಬದುಕು ಇಷ್ಟೊಂದು ನಿರಾಳವಾಗಿ ಬಿಟ್ಟಿದೆ ಎಂದು ಹೇಳುವುದು ಕಷ್ಟವಾಗಿದೆ. ಎಲ್ಲೋ ಏನೋ ಒಂಟಿತನದ ಭಯ ಆತಂಕಗಳು ಅವಳನ್ನು ಆವರಿಸುತ್ತಿವೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಬದುಕಿನ ಹಲವು ಸೂಕ್ಷ್ಮಗಳನ್ನು ಗ್ರಹಿಸಬೇಕಾಗಿದೆ. ಈ ಮೂಲಕ ವಾಸ್ತವದಲ್ಲಿ ನಮ್ಮ ಪರಿಸ್ಥಿತಿ ಹೇಗಿದೆ ಎಂಬುದನ್ನೂ ಅರ್ಥ ಮಾಡಿಕೊಂಡು ನಮ್ಮ ದಾರಿಯನ್ನು ನಾವೇ ಕಂಡುಕೊಳ್ಳ ಬೇಕಾಗಿದೆ.

ಕುಟುಂಬದ ಸದಸ್ಯರೆಲ್ಲರ ಪಾಲಿಗೆ ವಿಶೇಷವಾದ ಹಕ್ಕು ಬಾಧ್ಯತೆಗಳು ಅಲಿಖಿತವಾಗಿ ಬಂದಿರುತ್ತವೆ. ಪುರುಷ ಪ್ರಧಾನವಾದ ಈ ಸಮಾಜ ವ್ಯವಸ್ಥೆಯಲ್ಲಿ ಈ ಎಲ್ಲ ನಿಯಮಾವಳಿಗಳನ್ನೂ ರೂಪಿಸುವವನು ಪುರಷನೇ ಎಂದರೆ ಸಹಜವಾಗಿಯೇ ಎಲ್ಲವೂ ಅವನ ಮೂಗಿನ ನೇರಕ್ಕೆ, ಅವನ ಅನುಕೂಲಕ್ಕೆ ಸರಿಯಾಗಿಯೇ ಇರುತ್ತದೆ. ಹಾಗಾಗಿ ಹಕ್ಕುಗಳೆಲ್ಲ ಪುರುಷನದು, ಬಾಧ್ಯತೆಗಳೆಲ್ಲವೂ ಹೆಂಗನಿಸಿನದು ಎಂದಾಗಿಬಿಟ್ಟಿದೆ. ಈ ಎಲ್ಲದರ ಮುಖ್ಯ ಸೂತ್ರವಾಗಿ ವಿವಾಹ ಪದ್ಧತಿಯನ್ನು ರೂಪಿಸಲಾಗಿದೆ. ಹೆಂಗಸು ಹುಟ್ಟಿದ ಮನೆಯಲ್ಲಿ ಮಗಳಾಗಿ, ಸೋದರಿಯಾಗಿ ಬಾಲ್ಯ, ಹರೆಯದ ದಿನಗಳನ್ನು ಕಳೆಯುತ್ತಿರುವಾಗಲೂ ಸೇರುವ ಮನೆಯಲ್ಲಿ ಹೇಗೆ ಬದುಕಬೇಕೆಂಬ ತರಬೇತಿಯಲ್ಲೇ ಬೆಳೆಯುತ್ತಾಳೆ. ತಾಯಿ ಮನೆಯಲ್ಲೂ, ಅತ್ತೆ ಮನೆಯಲ್ಲೂ ಅಲ್ಲಿನ ಪುರುಷ ಸದಸ್ಯರ ಜೊತೆಗಿನ ಸಂಬಂಧಗಳ ನೆರಳನ್ನು ಅವಲಂಬಿಸುವುದು ಅವಳ ಬದುಕಾಗುತ್ತದೆ. ತನ್ನ ಹಕ್ಕುಗಳ ಬಗ್ಗೆ ಎಂದೂ ಕೂಡ ಆಲೋಚಿಸದೆ, ತಾನೂ ನಿರ್ವಹಿಸಬೇಕಾದ ಬಾಧ್ಯತೆಗಳನ್ನು ಕರ್ತವ್ಯಗಳನ್ನು ಕುರಿತು ಮಾತ್ರವೇ ಚಿಂತಿಸುವುದು ಅವಳಿಗೆ ಸೂಚಿತವಾಗಿರುವ ದಾರಿ. ಸಮಾಜವೇ ಆಗಲಿ, ಕುಟುಂಬವೇ ಆಗಲಿ ಅವಳು ಈ ದಾರಿಯಲ್ಲಿ ನಡೆದರೆ ಮಾತ್ರ ಅವಳನ್ನು ಮನ್ನಿಸುತ್ತದೆ. ಗೌರವ ಆದರಗಳನ್ನು ತೋರುವ ನಾಟಕವನ್ನಾಡುತ್ತದೆ.

ಆಧುನಿಕತೆಯ ಪ್ರವೇಶದೊಂದಿಗೆ ಹಳ್ಳಿಗಳೆಲ್ಲವೂ ನಗರಗಳತ್ತ ಧಾವಿಸಲಾರಂಭಿಸಿ ಬಿಟ್ಟಿವೆ. ಹಳ್ಳಿಯ ಈವರೆಗಿನ ಜೀವನದಲ್ಲಿ ಬೇಸಾಯ ಅಥವಾ ಕುಲಕಸುಬುಗಳನ್ನಾಧರಿಸಿದ ಆರ್ಥಿಕ ವ್ಯವಸ್ಥೆಯಿದ್ದದ್ದರಿಂದ ಒಟ್ಟು ಕುಟುಂಬಗಳು ಅನಿವಾರ್ಯವಾಗಿದ್ದವು. ಒಟ್ಟು ಕುಟುಂಬಗಳಲ್ಲಿನ ಒಳಜಗಳಗಳು, ಅನ್ಯಾಯ ಶೋಷಣೆಗಳು ಎಷ್ಟೇ ಇದ್ದರೂ ಪರಸ್ಪರ ಅವಲಂಬಿತವಾದ ಆ ಜಗತ್ತಿನಲ್ಲಿ ಯಾರೊಬ್ಬರೂ ತೀರಾ ನಿರ್ಗತಿಕರಾಗಿ, ಅಸಹಾಯಕರಾಗಿ, ಅನಾಥರಾಗಿ ಉಳಿದು ಹೋಗಿಬಿಡುವ ಸಾಧ್ಯತೆಯೇ ಇರಲಿಲ್ಲ. ಎಲ್ಲಕ್ಕಿಂತಲೂ ಮುಖ್ಯವಾಗಿ ಒಂಟಿತನದ ಆತಂಕಕ್ಕೆ ಇಲ್ಲಿ ಆಸ್ಪದವಾಗುತ್ತಿರಲಿಲ್ಲ. ಅನಾಥ ಮಕ್ಕಳೂ, ಬಾಲ ವಿಧವೆಯರೂ, ಅಂಗವಿಕಲರೂ ಕೂಡ ಬೀದಿಗೆ ಬೀಳದೆ ಬದುಕುವ ಒತ್ತಾಸೆಯನ್ನು ಒಟ್ಟು ಕುಟುಂಬಗಳು ಒದಗಿಸುತ್ತಿದ್ದವು. ಅಂದರೆ ಜೀವನ ನಿರ್ವಹಣೆಯ ಕನಿಷ್ಠ ಅಗತ್ಯಗಳನ್ನಾದರೂ ಒಟ್ಟು ಕುಟುಂಬಗಳು ನೋಡಿ ಕೊಳ್ಳಲೇಬೇಕಿತ್ತು. ಈ ಕರ್ತವ್ಯವನ್ನು ಅವು ಕೇವಲ ದಯದಾಕ್ಷಿಣ್ಯ ಔದಾರ್ಯಗಳಿಂದ ನೆರವೇರಿಸುತ್ತಿದ್ದವೆಂದೇನಲ್ಲ. ಸದಸ್ಯರೆಲ್ಲರೂ ಪರಸ್ಪರ ಅವಲಂಬನೆಯಿಲ್ಲದೆ ಬದುಕುವುದೇ ಅಸಾಧ್ಯವೆನಿಸುವ ಆರ್ಥಿಕ ವ್ಯವಸ್ಥೆ ಒಟ್ಟು ಕುಟುಂಬದ್ದು. ಹಾಗಾಗಿ ಯಾವ ಸದಸ್ಯರನ್ನು ನಿರ್ಲಕ್ಷಿಸಿ ಬಿಟ್ಟುಹಾಕುವುದು ಅದಕ್ಕೆ ಸಾಧ್ಯವಾಗದ ಮಾತು. ಇನ್ನು ಉಳಿದಂತೆ ಪ್ರತಿ ಸದಸ್ಯರ ನಡುವೆ ನಿರ್ಮಿತವಾಗುವ ಸಂಬಂಧಗಳು, ಪರಸ್ಪರ ಬೆಳೆಯುವ ಭಾವಲೋಕಗಳು ಕೂಡ ವ್ಯಕ್ತಿಗಳನ್ನು ಹಿಡಿದಿಡುವ ಧಾರಣಾಶಕ್ತಿಗಳಾಗಿ ಕೆಲಸ ಮಾಡುತ್ತವೆ.

ಆಧುನಿಕತೆಯೊಂದಿಗೆ ಬೆಸೆದುಕೊಂಡೇ ಬಂದ ಕೈಗಾರಿಕೀಕರಣ, ಶಿಕ್ಷಣ ಉದ್ಯೋಗಗಳ ಹೊಸ ಅವಕಾಶಗಳು ಒಟ್ಟು ಕುಟುಂಬಗಳನ್ನು ಒಡೆಯುವ ಮುಖ್ಯ ಸಾಧನಗಳಾದವು. ಒಬ್ಬೊಬ್ಬರೇ ಹಳ್ಳಿಗಳನ್ನು ಬಿಟ್ಟು ನಗರಗಳನ್ನು ಸೇರುತ್ತಾ ತಮ್ಮದೇ ಪ್ರತ್ಯೇಕ ಆರ್ಥಿಕ ಮೂಲಗಳನ್ನು ಕಂಡುಕೊಳ್ಳುತ್ತಾ ಹೋದಂತೆ, ಹೊಸ ಪರಿಸ್ಥಿತಿಗೆ ಅನುಗುಣವಾಗಿ ತಾನು, ತನ್ನ ಹೆಂಡತಿ, ತನ್ನ ಮಕ್ಕಳು ಮಾತ್ರವೇ ಇರುವ ಬಿಡಿ ಕುಟುಂಬವನ್ನು ಕಟ್ಟಿಕೊಳ್ಳುತ್ತಾ ಮೂಲದ ತನ್ನ ಕುಟುಂಬದೊಂದಿಗೆ ಸಂಪರ್ಕಗಳು ಕಡಿಯುತ್ತಾ ಬಂದವು. ಆಸ್ತಿವಂತ ಕುಟುಂಬಗಳನ್ನು ಬಿಟ್ಟರೆ ಉಳಿದ ಈ ಹೊಸ ಬಿಡಿ ಕುಟುಂಬಗಳು ಕೇವಲ ಭಾವನಾತ್ಮಕ ನೆಲೆಯಲ್ಲಷ್ಟೇ ಮೂಲ ಕುಟುಂಬದೊಂದಿಗೆ ಸಂಬಂಧಿತ ವಾಗಿರುವುದು. ಆದರೆ ಭಾವನೆಗಳು ಕಾಲ ಕಳೆಯುತ್ತಾ ದಟ್ಟವಾಗಿ ಉಳಿಯಲಾರವು. ತೆಳುವಾಗಿ ಬಿಡುತ್ತವೆ.

ಈ ಬಿಡಿ ಕುಟುಂಬಗಳಿಗೂ ಗಂಡಸೇ ಯಜಮಾನ ಎಂಬುದು ಗಮನಾರ್ಹ. ಯಥಾ ಪ್ರಕಾರ ಇಲ್ಲೂ ಕೂಡ ಹಕ್ಕುಗಳು ಅವನವು, ಬಾಧ್ಯತೆಗಳು ಅವಳವು. ಗಂಡನಿಗೆ ಅನುಕೂಲಕರವಾಗಿ ಕುಟುಂಬ ನಡೆಯುತ್ತಿದ್ದರೆ ಮಾತ್ರ ಈ ಬಿಡಿ ಕುಟುಂಬ ಸುಂದರ ಸುಖೀ ಸಂಸಾರದ ಬೀಡು. ಹೆಂಗಸಿನ ಕರ್ತವ್ಯ ನಿರ್ವಹಣೆಯಲ್ಲಿ ಆಗುವ ಸೂಕ್ಷ್ಮ ವ್ಯತ್ಯಾಸಗಳು ಕೂಡ ಈ ಬಿಡಿ ಕುಟುಂಬದ

ಯಜಮಾನನಾದ ಗಂಡಸಿಗೆ ಸ್ಪಷ್ಟವಾಗಿ ಕಾಣುತ್ತದೆ. ಒಟ್ಟು ಕುಟುಂಬದಲ್ಲಿ ಹೆಣ್ಣು ಕುಟುಂಬದ ಒಟ್ಟು ನಿಯಮಗಳನ್ನು ಪಾಲಿಸಬೇಕಷ್ಟೇ. ಇಲ್ಲಿಯಾದರೋ ತನ್ನ ಗಂಡನ ವಿಶಿಷ್ಟ ನಿಯಮಗಳನ್ನು ಪ್ರತ್ಯೇಕವಾಗಿ ಪರಿಗಣಿಸಿ ಪಾಲಿಸಬೇಕು. ಮಹಿಳೆಯರಿಗೆ ಹೊಸದಾಗಿ ತೆರೆದುಕೊಳ್ಳುತ್ತಿರುವ ಶಿಕ್ಷಣ, ಉದ್ಯೋಗಗಳ ಅವಕಾಶಗಳಿಗೆ ಬಿಡಿ ಕುಟುಂಬಗಳು ಪ್ರೋತ್ಸಾಹ ದಾಯಕವಾಗಿರುವ ಸಾಧ್ಯತೆ ಹೆಚ್ಚಾಗಿರಬೇಕು. ತನ್ನ ಸಾಧನೆಗಳನ್ನು ನಿರೂಪಿಸಲು, ತನ್ನ ಸಾಮರ್ಥ್ಯಗಳನ್ನು ಕಂಡುಕೊಳ್ಳಲು ಹೆಣ್ಣಿಗೆ ಸಿಗುವ ಅಪರೂಪದ ಸಂದರ್ಭವೆನಿಸಬೇಕು. ಆದರೆ ಈ ಸಂದರ್ಭವನ್ನು ಹೀಗೆ ತುಂಬಾ ಸುಲಭವಾಗಿ ಬಳಸಿಕೊಳ್ಳುವುದು ಹೆಣ್ಣಿಗೆ ಸಾಧ್ಯವಾಗುವುದಿಲ್ಲ. ಅವಳ ಸಾಧನೆಗಳು ಬಹುಮಟ್ಟಿಗೆ ಗಂಡಿನ ಅಹಂಗೆ ತಗಲುವ ಪೆಟ್ಟಾಗಿ ಕಂಡುಬಿಡುತ್ತದೆ. ಶಿಕ್ಷಣ, ಉದ್ಯೋಗ, ಗಳಿಕೆ, ಸಾಮಾಜಿಕ ಸ್ಥಾನಮಾನ, ಕೀರ್ತಿ-ಯಾವು ದೊಂದರಲ್ಲೂ ತನ್ನ ಸಾಧನೆ ಸಾಮರ್ಥ್ಯಗಳನ್ನು ಮೀರಿಸದಂತೆ ಇದ್ದಾಗ ಮಾತ್ರ ಗಂಡನು ಹೆಂಡತಿಗೆ ಪ್ರೋತ್ಸಾಹ ಬೆಂಬಲಗಳನ್ನು ನೀಡಿ ದೊಡ್ಡಸ್ತಿಕೆಯನ್ನು ಮೆರೆಯುತ್ತಾನೆ. ಈ ಔದಾರ್ಯದ ಉರುಳಿನಲ್ಲಿ ಸಿಲುಕಿದ ಹೆಣ್ಣು ಈವರೆಗೆ ನಡೆಸುತ್ತಿದ್ದ ಮನೆಯ ಕೆಲಸ ಬೊಗಸೆ, ಮಕ್ಕಳ ಲಾಲನೆ ಪಾಲನೆ, ಗಂಡನ ಸೇವೆ ಸೌಖ್ಯ-ಯಾವುದರಲ್ಲೂ ತನ್ನ ಸಾಧನೆಯ ಕಾರಣವಾಗಿ ಲೋಪ ಬಾರದಂತೆ ನಡೆದುಕೊಳ್ಳಬೇಕಾದ್ದು ಅವಳ ಕರ್ತವ್ಯವೇ ಆಗುತ್ತದೆ. ಗಂಡನ ಮೆಚ್ಚುಗೆ ಸಿಗಲೂಬಹುದು.

ಆರ್ಥಿಕ ಸೌಲಭ್ಯವಿರುವ ಕುಟುಂಬಗಳು ಕೆಲಸಕ್ಕೆ ಆಳುಗಳನ್ನು ನೇಮಿಸಿಕೊಳ್ಳಬಹುದು, ವಾಷಿಂಗ್ ಮೆಷೀನ್, ಕುಕ್ಕರ್, ಮಿಕ್ಸಿ, ಫ್ರಿಡ್ಜ್ ಎಂದು ಹಲವು ಗೃಹೋಪಕರಣಗಳನ್ನು ಬಳಸುತ್ತಾರೆ ಎಂಬಂತಹ ವಿವರಣೆಗಳನ್ನು ಕೊಟ್ಟರೂ, ಆ ಎಲ್ಲ ಕೆಲಸಗಳ ನಿರ್ವಹಣೆಯ ಜವಾಬ್ದಾರಿ ಮಾತ್ರ ಮನೆಯ ಹೆಂಗಸಿನದೇ ಆಗಿರುತ್ತದೆ ಎಂಬುದು ಗಮನಾರ್ಹ. ಯಾವುದೇ ಗೌರವಾನ್ವಿತ ಹೆಣ್ಣು ಕೂಡ ಎಂಥಾ ಶ್ರೀಮಂತಳೇ ಆಗಿದ್ದರೂ, ಬೆಳಿಗ್ಗೆ ಎದ್ದದ್ದೇ ಗಂಡಸಿನಂತೆ ಕಾಲ ಮೇಲೆ ಕಾಲು ಹಾಕಿಕೊಂಡು ಪೇಪರ್ ಓದುತ್ತಾ, ಕಾಫಿ ಕುಡಿಯುತ್ತಾ ಆರಾಮವಾಗಿ ಕುಳಿತಿರುವ ಚಿತ್ರವನ್ನು ನಮ್ಮ ಸಮಾಜದಲ್ಲಿ ಕಲ್ಪಿಸಲಾಗುವುದಿಲ್ಲ. ಕೆಟ್ಟ ಹೆಂಗಸರು ಮಾತ್ರವೇ ಹೀಗೆಲ್ಲಾ ಮಾಡುತ್ತಾರೆ. ಸಾಧ್ವಿಯಾದ ಹೆಂಗಸಾದರೋ, ಪತಿದೇವನು ಹಾಸಿಗೆಯಲ್ಲಿ ತಂಗಳು ನಿದ್ದೆಯ ಸುಖದಲ್ಲಿ ಹೊದ್ದು ಮಲಗಿದ್ದರೆ, ಸ್ನಾನ, ಪೂಜೆ ಬೆಳಗಿನ ಕಾಫಿ ತಿಂಡಿಗಳ ಸಿದ್ಧತೆಗಳನ್ನು ಪೂರೈಸಿ, ಬಿಸಿಕಾಫಿ, ದಿನಪತ್ರಿಕೆಗಳಿರುವ ಟ್ರೇಯನ್ನು ಹಿಡಿದು ಗಂಡನನ್ನು ಆಫೀಸಿಗೆ ಹೊರಡಲು ಹೊತ್ತಾಯಿತೆಂದು ಎಚ್ಚರಗೊಳಿಸಲು ಬರುತ್ತಾಳೆ. ಈ ಸೇವೆಯಲ್ಲಿ ಅವಳು ತುಂಬಾ ಸಂತೋಷದಿಂದ, ಪ್ರೀತಿಯಿಂದ ನಿರತಳಾಗಿರುವುದರಿಂದ ನಗು ನಗುತ್ತಾ ನವಚೈತನ್ಯ ತುಂಬಿದ ನಡವಳಿಕೆ ತೋರುತ್ತಾಳೆ. ಅವನು ನಿಧಾನವಾಗಿ ಮೈಮುರಿಯುತ್ತಾ ಎದ್ದುಕೂತು ಕಾಫಿ ಕಪ್ ತೆಗೆದುಕೊಂಡು ಮುಗುಳುನಗೆಯ ಶಹಬಾಸ್‌ಗಿರಿ ಕೊಟ್ಟ ಮೇಲೆ, ತಾನೂ ಆಫೀಸಿಗೆ ಹೊರಡ ಬೇಕಾಗಿರುವುದನ್ನು, ಮುಗಿಯದ ಮನೆಗೆಲಸವನ್ನು ನೆನೆದು ಒಳಗೆ ಧಾವಿಸುತ್ತಾಳೆ. ಆಳುಕಾಳುಗಳುಗಳಿದ್ದರೂ ಅಡಿಗೆ ಕೆಲಸ, ಗಂಡ ಮಕ್ಕಳ ವೈಯಕ್ತಿಕ ಕೆಲಸಗಳನ್ನು ಸ್ವತಃ ತಾನೇ ಮಾಡಿದರೇನೇ ತೃಪ್ತಿಯಾಗುವುದು ಎಂಬಂತಹ ಭ್ರಮೆಯ ಮಾತುಗಳನ್ನಾಡುವ ಮಹಿಳೆಯರ ಒತ್ತಡಗಳನ್ನು ಸುಲಭವಾಗಿ ವಿವರಿಸಲಾಗುವುದಿಲ್ಲ.

ಆಳುಕಾಳುಗಳು, ಗೃಹೋಪಕರಣಗಳು ಮನೆಗೆ ಬಂದವೆಂದ ಮೇಲೆ ಈ ಗೃಹಿಣಿಯ ಸಮಯದ ಉಳಿತಾಯವಾಗಿ ಬಿಟ್ಟಿತು ಎಂದು ಹೇಳಲಾಗುತ್ತದೆ. ಈಗಿನ ಹೆಂಗಸರಿಗೆ ಮನೆಗೆಲಸ ಅನ್ನೋದೇನಿದೆ, ಕುಟ್ಟಬೇಕಾ, ರುಬ್ಬಬೇಕಾ, ಕೆರೆಗೆ ಬಟ್ಟೆ, ಪಾತ್ರೆ ಹೊತ್ತುಕೊಂಡು ಹೋಗಬೇಕಾ, ಕಣ್ಣು ಮಿಟುಕಿಸೋದರಲ್ಲಿ ಚಕ್ ಚಕ್ ಅಂತ ಕೆಲಸ ಆಗಿಬಿಡತ್ತೆ ಅನ್ನೋದು ಜನ ಜನಿತವಾದ ಅಭಿಪ್ರಾಯ. ಆದರೆ ವಾಸ್ತವದಲ್ಲಿ ಉಳಿತಾಯವಾದ ಅವಳ ಸಮಯ ಅವಳಿಗೆ ದಕ್ಕುತ್ತಿದೆಯೇ ಎಂಬುದು ಅನುಮಾನ. ಅವಳ ಧಾವಂತವಂತೂ ಅವಳ ಅಮ್ಮ ಅಜ್ಜಿಯರು ಪಡುತ್ತಿದ್ದ ರೀತಿಯಲ್ಲೇ ಉಳಿದಿದೆ. ಹಾಗಾದರೆ ಹೊಸ ಸವಲತ್ತುಗಳು ಅವಳ ಕೆಲಸಗಳನ್ನು ಹಗುರ ಮಾಡಿದ್ದರಿಂದ ಉಳಿದ ಅವಳ ಸಮಯ ಎಲ್ಲಿ ಹೋಯಿತು? ಈಗ ಕೆಲವು ದಶಕಗಳ ಹಿಂದೆ- ಅದು ಒಟ್ಟು ಕುಟುಂಬವಾಗಿರಲಿ ಅಥವಾ ಬಿಡಿ ಕುಟುಂಬವಾಗಿರಲಿ ಮಹಿಳೆಯರು ಮನೆಕೆಲಸ ಬಿಟ್ಟು ಉಳಿದ ಹೊರಗಿನ ಯಾವ ಪುಡಿಕೆಲಸಗಳಿಗೂ ಹೋಗುತ್ತಿರಲಿಲ್ಲ. ಕೆರೆ ಬಾವಿಗಳಿಗೆ ಬಿಟ್ಟರೆ ಹೊರಗಿನ ಓಡಾಟದ ಸ್ವಾತಂತ್ರ್ಯ ಅವಳಿಗಿರಲೂ ಇಲ್ಲ. ಒಂದು ತರಕಾರಿ ಬೇಕಿರಲಿ, ಲೈಟ್‌ಬಿಲ್ ಕಟ್ಟುವುದಿರಲಿ, ಮಕ್ಕಳನ್ನು ಶಾಲೆಗೆ ಕಳಿಸಿ ಕರೆತರುವುದಿರಲಿ, - ಎಲ್ಲದಕ್ಕೂ ಅವಳು ಗಂಡನನ್ನೇ ಕೇಳುತ್ತಿದ್ದಳು. ಅವನು ತಂದು ಹಾಕಿದ್ದನ್ನು ಬೇಯಿಸುವುದು ಅವಳ ಕೆಲಸ

ಅವಳಿಗೆ ಶಿಕ್ಷಣವಿಲ್ಲದಿದ್ದರಂತೂ ಮನೆಯಲ್ಲಿ ಮಕ್ಕಳಿಗೆ ಪಾಠ ಹೇಳುವ ಕೆಲಸವೂ ಗಂಡನದೇ ಈಗಿನ ಮಹಿಳೆಗೆ ಶಿಕ್ಷಣವಿದೆ, ಉದ್ಯೋಗವಿದೆ, ಹೊರಗಿನ ವ್ಯವಹಾರಗಳ ಜ್ಞಾನವಿದೆ, ಓಡಾಟದ ಸ್ವಾತಂತ್ರ್ಯವಿದೆ. ಆಳುಗಳಿದ್ದಾರೆ, ಗೃಹೋಪಕರಣಗಳಿವೆಯಾಗಿ ಮನೆಗೆಲಸವೂ ಹಗುರವೇ ಆಗಿದೆ. ನೌಕರಿ ಮಾಡಿ ಗಳಿಸಿದ್ದರಿಂದಾಗಿ ಗಂಡನ ಅಪ್ಪಣೆ ಪಡೆದು ಅವಳೀಗ ಬಂದು ಲೂನಾ ಕೂಡ ಕೊಂಡುಕೊಂಡಿದ್ದಾಳೆ. ಸಹಜವಾಗಿ ಅವಳ ಎಷ್ಟೊಂದು ಸಮಯ ಉಳಿತಾಯ

ವಾಗಲೇಬೇಕು. ಆದರೆ ಗೃಹೋಪಕರಣಗಳು, ಸ್ವಂತ ವಾಹನ, ವ್ಯವಹಾರ ಚಾಕಚಕ್ಯತೆಗಳೆಲ್ಲವೂ ಇದ್ದರೂ ಅವಳಿಗೆ ಬಿಡುವಿನ ಸಮಯವೇ ಸಿಗುತ್ತಿಲ್ಲವೇಕೆ? ಅವಳ ಸಮಯ ಉಳಿತಾಯ ವಾದದ್ದೇನೋ ನಿಜವೇ. ಆದರೆ ಅದು ಅವಳಿಗೆ ದಕ್ಕಲಿಲ್ಲ. ಅವಳ ಉಳಿತಾಯದ ಸಮಯವೆಲ್ಲವನ್ನೂ ಪರೋಕ್ಷವಾಗಿ ಅವಳ ಗಂಡನೇ ಬಳಸತೊಡಗಿ ಬಿಟ್ಟಿದ್ದಾನೆ. ಅವನೀಗ ಉಪಾಯವಾಗಿ ತನ್ನಪಾಲಿನ ಕೆಲಸಗಳೆಲ್ಲವನ್ನೂ ಅವಳಿಗೆ ರವಾನಿಸಿ ಬಿಡುತ್ತಾನೆ. ಓಡಾಟದ ಹೊಸ ಸ್ವಾತಂತ್ರ್ಯ ಗಳಿಸಿದ ಮಹಿಳೆ ಹುಮ್ಮಸ್ಸಿನಿಂದ ಶಾಲೆಯಿಂದ ಮಕ್ಕಳನ್ನು ಕರೆತರುತ್ತಾಳೆ. ಎಳೆ ಮಗುವಾದರೆ ಕ್ರಷ್‌ನಲ್ಲಿ ಬಿಡುತ್ತಾಳೆ, ನೌಕರಿಯಿಂದ ಹಿಂತಿರುಗುವಾಗ ಹಾಗೇ ತರಕಾರಿ ತರುತ್ತಾಳೆ, ಹೋಗುವಾಗ ಲೈಟ್‌ಬಿಲ್ ಫೋನ್ ಬಿಲ್ ಮಗನ ಫೀಸ್ ಏನಿದ್ದರೂ ಕಟ್ಟುತ್ತಾಳೆ. ಗೃಹೋಪಕರಣಗಳು ಕೆಟ್ಟು ಕೈಕೊಟ್ಟರೆ ಮೆಕಾನಿಕ್ಕನ್ನೂ ಕರೆತರುತ್ತಾಳೆ.....ಇನ್ನೂ ಎಷ್ಟೆಷ್ಟೋ. ಗಂಡಸಿನ ಛಾತಿಯಿಂದ ಎಲ್ಲವನ್ನೂ ನಿಭಾಯಿ ಸುತ್ತಾಳೆಂಬ್ಲ ಹೊಗಳಿಕೆ ಸಿಕ್ಕು ಇದು ತನ್ನ ಸಾಧನೆ, ಸಂತೋಷ ಎಂದು ಬೀಗುತ್ತಾಳೆ. ಕೊನೆಗೂ ಮೊದಲಿನ ಹಾಗೇ ಅವಳದು ಎಂಬ ಸಮಯ ಉಳಿಯುವುದೇ ಇಲ್ಲ. ಅಥವಾ ಇನ್ನಷ್ಟು ಬಾಡಿ ಬಸವಳಿಯುವ ಸಂದರ್ಭ ಎಂದರೂ ನಡೆಯುತ್ತದೆ. ಹೆಂಗಸರದೆನಿಸಿದ ಕೆಲಸಗಳನ್ನು ಗಂಡಸು ಮಾಡಿದರೆ ಅವನು ಹೆಣ್ಣಿಂಗಿ ಎನಿಸಿ ಅಪಮಾನಕ್ಕೆ ಈಡಾದರೆ, ಗಂಡಸಿನದೆನಿಸಿದ ಕೆಲಸಗಳನ್ನು ಹೆಂಗಸು ಮಾಡಿದರೆ ಅವಳು 'ಎಂಥಾ ಛಾತಿವಂತೆ' ಎಂದು ಹೊಗಳಿಸಿ ಕೊಳ್ಳುತ್ತಾಳೆ. ನಮ್ಮ ಹೆಣ್ಣು ಮಕ್ಕಳು ಈ ಭ್ರಮೆಗಳಲ್ಲಿ ಮತ್ತೆ ಮತ್ತೆ ಸಿಲುಕಿಕೊಳ್ಳುತ್ತಾ ಮೋಸ ಹೋಗುತ್ತಿದ್ದಾರೆ. ಸತಿಪತಿಗಳ ನಡುವೆ ಪರಸ್ಪರ ಕೊಡುಕೊಳೆ ಎಂದಾದರೆ ಯಾರು ಯಾವ ಕೆಲಸ ಮಾಡಿದರೂ ತಪ್ಪೇನಿಲ್ಲ. ಉದಾಹರಣೆಗೆ ಆಧುನಿಕ ವಿಜ್ಞಾನ ತಂತ್ರಜ್ಞಾನಗಳಿಂದಾಗಿ ಪುರುಷನ ಕೆಲಸಗಳೂ ಹಗುರವೆನಿಸಿ ಶ್ರಮ, ಸಮಯಗಳು ಉಳಿಯು ತ್ತಿವೆಯಲ್ಲವೇ? ಅವನು ಮಾತ್ರ ತನಗೆ ದೊರೆತ ಸೌಲಭ್ಯ, ಬಿಡುವುಗಳನ್ನು ತನಗಾಗಿ ಬಳಸಿಕೊಳ್ಳುತ್ತಾನೆ. ಹೊಲ ಗದ್ದೆಗಳ ಕೆಲಸಗಳಲ್ಲಿ ಬಳಕೆಗೆ ಬಂದಿರುವ ಹೊಸ ಯಂತ್ರೋಪಕರಣ ಗಳೆಲ್ಲವೂ ಗಂಡಸಿಗೆ ನೆರವಾಗುವಂಥವೇ. ಇತರ ಎಷ್ಟೋ ಕ್ಷೇತ್ರಗಳಲ್ಲೂ ಇಂಥಾ ನೆರವು ದೊರೆಯುತ್ತಾ ಅವನಿಗೆ ಹೆಚ್ಚಿನ ಬಿಡುವು ಸಿಗುತ್ತದೆ. ಈ ಬಿಡುವನ್ನು ಅವನು ತನ್ನ ಐಷಾರಾಮಕ್ಕೋ, ಹೆಚ್ಚಿನ ಗಳಿಕೆಗೋ ಬಳಸುತ್ತಾನೆಯೇ ಹೊರತು, ಹೆಂಡತಿಯ ಪಾಲಿನ ಕೆಲಸವನ್ನು ಮಾಡಿ ಕಳೆದು ಕೊಳ್ಳುವುದಿಲ್ಲ.

ದುಡಿಮೆ, ಬಿಡುವುಗಳ ವಿಚಾರ ಹೀಗಾದರೆ ಇನ್ನು ಹೆಂಗಸು ಈ ಬಿಡಿ ಕುಟುಂಬಗಳಲ್ಲಿ ಅನುಭವಿಸಬೇಕಾಗಿ ಬರುವ ಒಂಟಿತನ, ಅನಾಥತೆ, ಅರಕ್ಷಿತ ಭಾವಗಳಿಂದಾಗಿ ಕಟ್ಟಿಕೊಳ್ಳುವ ಆತಂಕದ ಮನಸ್ಥಿತಿ ಇನ್ನಷ್ಟು ಸೂಕ್ಷ್ಮತರದ ಸಮಸ್ಯೆ. ಉದಾಹರಣೆಗೆ ಕಟ್ಟಿಕೊಂಡ ಗಂಡ ಸರಿಯಾಗಿ ಬಾಳಿಸುವ ವನಲ್ಲವಾದರೆ ಅವಳು ಯಾರಲ್ಲಿ ನೆರವು ಕೇಳಬೇಕು? ಒಟ್ಟು ಕುಟುಂಬದಲ್ಲಾದರೆ ಆ ಗಂಡನಿಗೆ ಬುದ್ಧಿ ಹೇಳಬಲ್ಲವರು ಇರಬಹುದು. ಅಷ್ಟಕ್ಕೂ ಮೀರಿದರೆ ಸಾಮಾಜಿಕ ಭಯಕ್ಕಾದರೂ ಆ ಕುಟುಂಬ ಅವಳಿಗೆ ಕನಿಷ್ಠ ಸೌಲಭ್ಯ ಗಳನ್ನು ನೀಡಿಯಾದರೂ ಬಾಳಿಸಲೇಬೇಕಾಗುತ್ತದೆ. ಬೀದಿಗೆ ಬೀಳುವ ಪ್ರಸಂಗಕ್ಕಂತೂ ಅವಕಾಶವಿಲ್ಲ. ಇನ್ನು ಅಕಸ್ಮಾತ್ ವಿಧವೆಯಾದರೆ, ಇನ್ನಾವು ದಾದರೂ ಅನುವು ಆಪತ್ತುಗಳು ಬಂದರೆ ಬಿಡಿ ಕುಟುಂಬಗಳಲ್ಲಿ ಬಹುತೇಕ ಅದರ ಭಾರವೆಲ್ಲವೂ ಹೆಂಗಸಿನ ಮೇಲೇ ಬೀಳುತ್ತದೆ. ಶಿಕ್ಷಣ, ನೌಕರಿಗಳ ಬಲವಿದ್ದಾಗ ಆಕೆ ಸ್ವಲ್ಪ ಧೈರ್ಯ ವಹಿಸಬಹುದಾದರೂ ಗುರುತರವಾದ ಸಾಮಾಜಿಕ ಜವಾಬ್ದಾರಿ ಗಳನ್ನು ಒಂಟಿಯಾಗಿ ನಿಭಾಯಿಸುವಾಗ ಕಂಗೆಡುವ ಸ್ಥಿತಿಗೆ ಸಿಲುಕುತ್ತಾಳೆ. ಇನ್ನು ಶಿಕ್ಷಣ, ಉದ್ಯೋಗಗಳೂ ಇಲ್ಲದೆ ಆರ್ಥಿಕವಾಗಿ ದುರ್ಬಲಳಾಗಿದ್ದರಂತೂ ಈ ಸಮಸ್ಯೆ ಇನ್ನಷ್ಟು ಬೃಹದಾಕಾರದ್ದಾಗುತ್ತದೆ. ಇವೇ ಸಂದರ್ಭಗಳು ಆ ಬಿಡಿ ಕುಟುಂಬಗಳ ಪುರುಷನಿಗೂ ಬರಲಾರದೇ ಎಂಬ ಪ್ರಶ್ನೆ ಇದೆ. ಆದರೆ ಆ ಸಂದರ್ಭಗಳಲ್ಲಿ ಪುರುಷನು ಸುಲಭವಾಗಿ ಪಾರಾಗಬಹುದಾದ ಹಲವು ಮಾರ್ಗಗಳನ್ನು ಕಾಣಲು ಸಮಾಜ ಅವಕಾಶಗಳನ್ನು ಕಲ್ಪಿಸಿದೆ. ಉದಾಹರಣೆಗೆ ಹೆಂಡತಿ ಅನುಕೂಲಕರಳಾಗಿಲ್ಲ ಎನಿಸಿದರೆ ಅವನು ಅವಳಿಂದಷ್ಟೇ ಏಕೆ, ಮನೆಯಿಂದಲೇ ವಿಮುಖನಾಗಿ ಹೊರಗಿನ ಸಂಬಂಧಗಳಲ್ಲಿ, ವ್ಯವಹಾರಗಳಲ್ಲಿ, ತನ್ನದೇ ಆದ ಸಾಧನೆಗಳಲ್ಲಿ ಮುಳುಗಿ ಸಮಸ್ಯೆಯಿಂದ-ಪಲಾಯನ ಮಾಡಿಬಿಡಬಹುದು. ಅಥವಾ ಅವಳನ್ನೇ ಹೊರಗೆ ಹಾಕಿದರೂ ಆಯಿತು. ಅವನಿಗೆ ಒದಗುವ ಒಂಟಿತನ ಅಥವಾ ಇನ್ನಾವುದೇ ಕಷ್ಟಕಾರ್ಪಣ್ಯಗಳನ್ನು ನಿವಾರಿಸುವ ಹಲವು ಉಪಾಯಗಳು ಮುಕ್ತವಾಗಿ ಅವನಿಗೆ ದಕ್ಕಬಲ್ಲವು ಎಂಬುದು ಗಮನಾರ್ಹ.

ಬಿಡಿ ಕುಟುಂಬಗಳಲ್ಲಿ ಹೆಣ್ಣಿಗೆ ಸೂಕ್ತ ರಕ್ಷಣೆ ಇಲ್ಲ ಎಂಬುದಕ್ಕೆ ವಿವಾಹ ಸಂಬಂಧದಲ್ಲಿ ಹೊಸದಾಗಿ ಕಾಣಿಸಿ ಕೊಳ್ಳುತ್ತಿರುವ ಎರಡು ಸಂದರ್ಭಗಳನ್ನು ಗಮನಿಸಬಹುದು. ನಮ್ಮ ಅನೇಕ ಗಂಡಸರು ಹಣ ಮಾಡಲು ಕೊಲ್ಲಿ ರಾಷ್ಟ್ರಗಳಿಗೆ ಹೋಗುತ್ತಿದ್ದಾರೆ. ವರ್ಷಾನುಗಟ್ಟಲೆ ಅವರು ಹೀಗೆ ಮನೆ ಮಠ ಬಿಟ್ಟು ಹೊರಟು ಹೋದಾಗ ಇಲ್ಲಿನ ಕುಟುಂಬದ ಜವಾಬ್ದಾರಿ ಪೂರ್ಣವಾಗಿ ಹೆಣ್ಣಿನದಾಗುತ್ತದೆ. ವಿವಾಹವಾಗಿಯೂ ಒಂಟಿಯಾಗಿರುತ್ತಾ, ಮನೆಯನ್ನು ಮಕ್ಕಳನ್ನೂ ಸಂಭಾಳಿಸುವ ಕಷ್ಟಕರವಾದ ಹೊಣೆಯಿಂದಾಗಿ ತತ್ತರಿಸುತ್ತಾ ಅವಳು ದಿನಗಳನ್ನು

ಎಣಿಸುತ್ತಾಳೆ. ಎರಡು ವರ್ಷಕ್ಕೋ ನಾಲ್ಕು ವರ್ಷಕ್ಕೋ ಒಮ್ಮೆ ಬಂದು ಮುಖ ತೋರಿಸುವ ಗಂಡ ತಂದ ಹಣವನ್ನು ಸುಳ್ಳು ಪ್ರತಿಷ್ಠೆಯ ಗುರುತಾಗಿ ಬಳಸಿ ಮುಖದಲ್ಲಿ ನಗೆಯನ್ನು ಚೆಲ್ಲಬಹುದಾದರೂ ನಿಜವಾಗಿ ಅವಳ ಬದುಕಿಗೆ ಉಳಿಯುವ ಅರ್ಥವಾದರೂ ಎಷ್ಟು? ಈ ಪ್ರತಿಷ್ಠೆ ತಾನೇ ಎಷ್ಟು ಮಟ್ಟಿಗೆ ಅವಳದು? ಹೊರಗೆ ಹೋದ ಗಂಡಸು ಇಲ್ಲಿನ ಮನೆ, ಮಠ, ಆಸ್ತಿಪಾಸ್ತಿ, ಮಕ್ಕಳ ಜೊತೆಗೆ ಹೆಂಡತಿಯನ್ನು ಸೇರಿಸಿಯೇ ತನ್ನ ಹಕ್ಕಿನ ಆಸ್ತಿಯನ್ನಾಗಿ ಪರಿಗಣಿಸಿ ಬೆಳೆಸುತ್ತಾನೆ. ತನ್ನ ಗೈರುಹಾಜರಿಯ ವರ್ಷಗಳುದ್ದಕ್ಕೂ ತನ್ನ ಹೆಂಡತಿ ನಿಷ್ಠೆಯಿಂದ ಪಾತಿವ್ರತ್ಯವನ್ನು ಕಾಪಾಡಿಕೊಂಡಿದ್ದಾಳೆಯೇ ಎಂಬ ಬಗ್ಗೆ ಪ್ರಮಾಣವನ್ನು ಕೇಳುತ್ತಾನೆ. ಹೆಂಡತಿ ಅವನು ಗಳಿಸಿ ತಂದದ್ದನ್ನು ಜೋಪಾನವಾಗಿ ನೋಡಿಕೊಳ್ಳುವ ಕಾವಲುಗಾರಳಾಗಿರುತ್ತಾಳಷ್ಟೇ. ಆದರೆ ಉಳಿದಂತೆ ಅವನ ಅಲ್ಲಿನ ದಿನ ನಿತ್ಯದ ಜೀವನ ಸೌಲಭ್ಯಗಳಿಗೆ ಯಾವ ಕೊರತೆಯೂ ಬರಬೇಕೆಂದೇನೂ ಇಲ್ಲ.

ಇನ್ನೊಂದು ಇಂಥದೇ ಸಂದರ್ಭ ನಮ್ಮ ಹೆಣ್ಣುಮಕ್ಕಳು ವಿದೇಶದಲ್ಲಿರುವ ಅನಿವಾಸಿ ಭಾರತೀಯ 'ವರ'ಗಳನ್ನು ಮದುವೆಯಾಗುವುದು. ಬಿಡಿ ಕುಟುಂಬಗಳನ್ನು ನಮ್ಮದೇ ಊರು ಪ್ರಾಂತಗಳಲ್ಲಿ ಹೂಡುವಾಗಲೇ ಎಷ್ಟೊಂದು ಸಮಸ್ಯೆಗಳಿವೆ. ಇನ್ನು ಕಾಣದ ದೇಶದಲ್ಲಿ, ಕೂಗಿಕೊಂಡರೂ ತನ್ನವರೆಂಬುವರಿಲ್ಲದ ಜಾಗದಲ್ಲಿ, ಅಪರಿಚಿತನೊಬ್ಬನ ಹಿಂದೆ ಸಮಾಜವು ಗಂಡ-ಹೆಂಡತಿ ಎಂದು ಹೇಳಿದ ಸಂಬಂಧವನ್ನಷ್ಟೇ ನಂಬಿ ನಡೆದು ಸಂಸಾರ ಹೂಡಿದಾಗ ಹೆಣ್ಣು ಅನಾಥಳಾಗುವ ಬಗೆಯನ್ನು ಊಹಿಸುವುದೂ ಕಷ್ಟ. ವಿದೇಶವಾಸಿಯಾದ ಈ ವರನ ಹೆಗ್ಗಳಿಕೆಯ ವಿವರಗಳೆಲ್ಲವೂ ಕೇವಲ ಪ್ರತಿಷ್ಠೆಗೆ ಬೇಕಾಗುವಂಥವು. ಪತ್ರಿಕೆಗಳಲ್ಲೋ ಇಂಟರ್‌ನೆಟ್‌ಗಳಲ್ಲೋ ಏರ್ಪಟ್ಟ ಸಂಬಂಧದಲ್ಲಿ ಜೀವನಪೂರ್ತಿ ಒದಗಿ ಬರುವ ನಂಬಿಕೆ, ವಿಶ್ವಾಸಗಳನ್ನು ನಿರೀಕ್ಷಿಸುವುದು ಜೂಜಿನಷ್ಟೇ ಫಲದಾಯಕ. ಇಲ್ಲಿ ಸುಖದುಃಖ; ಲಾಭ ನಷ್ಟಗಳು ಗಂಡಿನ ಪಾಲಿಗೂ ಇದೆಯಾದರೂ ಹೆಣ್ಣು ಹೆಚ್ಚಿನ ಅಪಾಯದಲ್ಲಿರುತ್ತಾಳೆ. ಏಕೆಂದರೆ ಅವಳದು ರಿಸೀವಿಂಗ್ ಎಂಡ್. ಇಲ್ಲಿಂದ ಹೆಂಡತಿ ಎಂದು ಕೈಹಿಡಿದು ಕರೆದುಕೊಂಡು ಹೋದ ಗಂಡ ಅಲ್ಲಿ ಅವಳನ್ನು ಗುಲಾಮಳಂತೆ ನಡೆಸಿಕೊಂಡರೆ, ನಂಬಿಕೆ ದ್ರೋಹ ಮಾಡಿದರೆ ಕೂಗಿ ಕೊಳ್ಳಲೂ ಆಗದ ಸ್ಥಿತಿಗೆ ಅವಳು ಬೀಳುತ್ತಾಳೆ. ತಪ್ಪಿಸಿಕೊಂಡು ಬರಲೂ ಆಗದೆ ಸಾಯುವಂತಾಗುತ್ತಾಳೆ. ಇನ್ನು ದಿನನಿತ್ಯದ ಹತ್ತದ ಹರಿಯದ ಕಿರಿಕಿರಿಗಳಾದರಂತೂ ನುಂಗಲಾಗದ ಉಗುಳಲಾಗದ ಬಿಸಿತುಪ್ಪ ಗಂಟಲಿಗೆ ಸುರಿದು ಕೊಂಡಂತೆಯೇ ಸರಿ. ಇದ್ದ ಜಾಗದಲ್ಲಾದರೆ ಬಂಧು ಬಳಗದ ನಡುವೆ ಆಡಿ ಅಂದಾದರೂ ಸ್ವಲ್ಪ ಹಗುರ ವಾಗಬಹುದು. ಈಗ ಅದಕ್ಕೂ ಅವಕಾಶವಿಲ್ಲದಾಗುತ್ತದೆ. ಗಂಡನಿಗೆ ಈ ರಿಸ್ಕ್‌ಗಳಂತೂ ಇಲ್ಲ. ಏಕೆಂದರೆ ಎಲ್ಲದರ ಸಂಪೂರ್ಣ ಹತೋಟಿ ಅವನಲ್ಲಿರುತ್ತದೆ. ಕಾಣದ ಹುಡುಗಿ ಹೆಂಡತಿಯಾಗಿ ಬಂದು ಹೊಂದಿಕೊಂಡು ಇರಲಿಲ್ಲ ವೆಂದರೆ, ಅವನಿಗೆ ಅವಳು ಬೇಜಾರಿನವಳೆನಿಸಿ ಬಿಟ್ಟರೆ ಅವಳನ್ನು ಕಟ್ಟಿಹಾಕಿ ಬೆದರಿಸಬಹುದು, ಮೀರಿದರೆ ಒದ್ದು ಓಡಿಸಿಯೇ ಬಿಡಬಹುದು.

ಇಂದಿನ ಬಿಡಿ ಕುಟುಂಬಗಳಲ್ಲಿ ಹೆಣ್ಣು ಎದುರಿಸಬೇಕಾಗಿರುವ ಸಮಸ್ಯೆಗಳನ್ನು ವಿವರಿಸಿಕೊಳ್ಳುತ್ತಾ ಹೋದರೆ ಕೊನೆ ಮೊದಲಿಲ್ಲದೇ ಬೆಳೆಯಬಹುದೇನೋ. ಆದರೆ ಒಟ್ಟು ಜಾಗತಿಕ ನೆಲೆಯ ಹಲವು ಕಾರಣಗಳಿಂದಾಗಿ ಕುಟುಂಬಗಳು ವಿಘಟನೆಗೊಳ್ಳುತ್ತಾ ಬಿಡಿ ಕುಟುಂಬಗಳು ಅಸ್ತಿತ್ವಕ್ಕೆ ಬರುತ್ತಿರುವದೇನನ್ನು ತಪ್ಪಿಸಿ ಮೊದಲ ಸ್ಥಿತಿಗೆ ತರಲಾಗದು. ಆದರೂ ಹೆಣ್ಣಾಗಿರುವ ಕಾರಣಕ್ಕಾಗಿಯೇ ಒದಗುತ್ತಿರುವ ಅಪಾಯಗಳನ್ನು ಸ್ವಲ್ಪ ಎಚ್ಚರಿಕೆಯಿಂದ ನಿರ್ವಹಿಸಿದರೆ ಬದುಕನ್ನು ಎದುರಿಸಲು ಸಜ್ಜಾಗುವುದು ಸಾಧ್ಯ. ಅದರ ಒಂದು ಪ್ರಮುಖ ಸಾಧ್ಯತೆಯಾಗಿ ಶಿಕ್ಷಣ, ಉದ್ಯೋಗಗಳು ಕೇವಲ ತಾಂತ್ರಿಕ ಅಗತ್ಯಗಳಂತಾದರೆ ಏನೂ ಪ್ರಯೋಜನವಿಲ್ಲ. ಹೊಸ ಪರಿಸರದ ಹೊಸ ಸಂದರ್ಭಗಳಲ್ಲಿ ಇವುಗಳನ್ನು ವಿವೇಕದಿಂದ ಬಳಸುವ ಸಾಮರ್ಥ್ಯ ವನ್ನು ನಮ್ಮ ಹೆಣ್ಣುಮಕ್ಕಳು ದಕ್ಕಿಸಿಕೊಳ್ಳದೆ ಹೋದರೆ ಅವರ ಶಿಕ್ಷಣ ಉದ್ಯೋಗಗಳಿಗೆ ಅರ್ಥವೇ ಉಳಿಯುವುದಿಲ್ಲ. ಉದಾಹರಣೆಗೆ ಇಂದಿನ ನಮ್ಮ ಅನೇಕ ಶಿಕ್ಷಿತ, ಉದ್ಯೋಗಸ್ಥ ಮಹಿಳೆಯರೂ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳಲಾರದ ದೌರ್ಬಲ್ಯವನ್ನೇ ಪ್ರದರ್ಶಿಸುತ್ತಾರೇಕೆ ಎಂಬುದನ್ನು ಯೋಚಿಸಿ. ಗಳಿಸಿ ತಂದದ್ದನ್ನು ಗಂಡನ ಕೈಯಲ್ಲಿಟ್ಟು ಬಸ್‌ಛಾರ್ಜಿಗೆ ಅವನ ಮುಖ ನೋಡುವ ಹೆಂಗಸರಿದ್ದಾರೆ. ತಮ್ಮ ನ್ಯಾಯಬದ್ಧ ಹಕ್ಕುಗಳನ್ನು ಆರ್ಥಿಕ ಸ್ವಾವಲಂಬನೆ ಇದ್ದಾಗಲೂ ಸಾಧಿಸಲಾಗದೆ ಅಸಹಾಯಕರಾಗುವುದಾದರೆ ಇಂಥಾ ಶಿಕ್ಷಣ, ಉದ್ಯೋಗ ಅಥವಾ ಗಳಿಕೆಗಳಿಂದ ಏನೇನೂ ಲಾಭವಿಲ್ಲ. ಇದರರ್ಥ ತನ್ನ ಹಣವನ್ನು ಪ್ರತ್ಯೇಕವಾಗಿಟ್ಟುಕೊಂಡು ಸ್ವಾರ್ಥಕ್ಕೆ ಬಳಸಬೇಕೆಂದಲ್ಲ. ಗಂಡನ ಗಳಿಕೆಗೆ ಇರುವಷ್ಟೇ ಹೆಂಡತಿಯ ಗಳಿಕೆಗೂ ಒಂದು ಬೆಲೆಯಿದೆ ಎನ್ನುವುದನ್ನು ಹೇಳಬೇಕಷ್ಟೇ. ಇಬ್ಬರೂ ಜವಾಬ್ದಾರಿಯಿಂದ ತಮ್ಮ ಗಳಿಕೆಯನ್ನು ಬಳಸಬೇಕೆಂದು ನಿರ್ವಿವಾದ. ಆತನ ಗಳಿಕೆ ಅವನಿಗೆ ಸ್ವಾತಂತ್ರ್ಯ, ಆತ್ಮವಿಶ್ವಾಸಗಳನ್ನು ಒದಗಿಸಿದಂತೆ ಆಕೆಯ ಗಳಿಕೆ ಅವಳಿಗೂ ಸ್ವಾತಂತ್ರ್ಯ ಮತ್ತು ಆತ್ಮವಿಶ್ವಾಸಗಳನ್ನು ಒದಗಿಸಬೇಕು. ಉದ್ಯೋಗಸ್ಥಳಾದ ಹೆಂಗಸರು ಮನೆವಾರ್ತೆಯ ಕೆಲಸಗಳನ್ನು, ಗೃಹಿಣಿಯಾಗಿ ತಾಯಿಯಾಗಿ ತಾನು ನಿರ್ವಹಿಸಬೇಕಾದ ಕೆಲಸಗಳನ್ನು ಕೂಡ ಜೊತೆಜೊತೆಯಲ್ಲೇ ನಿರ್ವಹಿಸುತ್ತಾಳೆ. ತನ್ನ ದುಡಿಮೆ ಗಳಿಕೆಗಳ ಬಗೆಗೆ ಅವಳಲ್ಲಿ ಆತ್ಮವಿಶ್ವಾಸವಿದ್ದರೆ ಮಾತ್ರವೇ ಗಂಡನ ಸರಿಸಮನಾಗಿ ತನ್ನನ್ನು ಭಾವಿಸಿಕೊಂಡು

ಮನೆಯ ಎಲ್ಲ ಹೊಣೆಗಾರಿಕೆಗಳಲ್ಲಿ ಅವನೂ ಭಾಗವಹಿಸ ಬೇಕೆಂದು ಅವನನ್ನು ಒಪ್ಪಿಸಲು ಸಮರ್ಥಳಾಗುತ್ತಾಳೆ. ಇದು ಅಷ್ಟೇನೂ ಸುಲಭದ ಕೆಲಸವಲ್ಲ ಎಂಬುದು ನಮ್ಮ ಸಾಮಾಜಿಕ ಸಂದರ್ಭದಲ್ಲಿ ನಿಜ. ಉದಾಹರಣೆಗೆ ನೌಕರಿ, ಗಳಿಕೆಗಳಲ್ಲಿ, ತನಗಿಂತ ಹೆಚ್ಚಿನ ಸಾಧನೆಯನ್ನು ಮಾಡಿದ ಹೆಂಡತಿಯನ್ನು ಯಾವ ಗಂಡನೂ ಸಹಿಸುವುದಿಲ್ಲ. ನೌಕರಿಯಿಂದ ಬಿಡಿಸಿ ಮನೆಯಲ್ಲೇ ಅವಳನ್ನು ಕೊಳೆಹಾಕಲು ಸಕಲ ಪ್ರಯತ್ನಗಳನ್ನು ಮಾಡುತ್ತಾನೆ. ಈಗ ಕೆಲವು ದಶಕಗಳ ಹಿಂದೆ ಓದಿದ, ನೌಕರಿಯಲ್ಲಿರುವ 'ಹೆಣ್ಣು'ಗಳಿಗಾಗಿ 'ವರ'ಗಳು ಹುಡುಕುತ್ತಿದ್ದರು. ಅಂದರೆ ಅವಳ ಓದು, ನೌಕರಿ ಸಮಾಜದಲ್ಲಿ ನಾಲ್ಕು ಜನರೆದುರು ಹೇಳಿಕೊಳ್ಳಲು, ತನ್ನ ಪ್ರತಿಷ್ಠೆಯನ್ನು ಮೆರೆಸಲೂ ಬೇಕಾಗಿತ್ತು. ಈಗ ಸಂದರ್ಭ ಸ್ವಲ್ಪ ಭಿನ್ನವಾಗಿದೆ. ಈಗೀಗ ಹೆಣ್ಣುಮಕ್ಕಳು ಗಂಡು ಮಕ್ಕಳಷ್ಟೇ ಸಮರ್ಥರಾಗಿ ಇಂಜಿನಿಯರುಗಳೂ, ಡಾಕ್ಟರುಗಳೂ ಆಗುತ್ತಿದ್ದಾರೆ. ಐಟಿ ಕ್ಷೇತ್ರದಲ್ಲಂತು ಹುಡುಗರನ್ನು ಮೀರಿಸಿ ಮುನ್ನಡೆಯುತ್ತಿದ್ದಾರೆ. ದೊಡ್ಡದೊಡ್ಡ ಕಂಪನಿಗಳವರು ಈ ಹುಡುಗಿಯರನ್ನು ದೊಡ್ಡ ಮೊತ್ತದ ಸಂಬಳಗಳನ್ನು ಕೊಟ್ಟು, ನೌಕರಿಗಳಲ್ಲಿ ನೇಮಿಸಿ ಕೊಳ್ಳುತ್ತಿದ್ದಾರೆ. ನಮ್ಮ ಈಗಿನ 'ವರ'ಗಳಿಗೆ ತಮಗಿಂತ ಮುನ್ನಡೆದಿರುವ ಈ ಹುಡುಗಿಯರನ್ನು ಹೆಂಡತಿಯರೆಂದು ಆಯ್ಕೆ ಮಾಡುವುದು ಇಷ್ಟವಾಗುತ್ತಿಲ್ಲ. ಅದನ್ನು ಹಾಗೆ ನೇರವಾಗಿ ಹೇಳಿದರೆ ತಮಗೇ ಅವಮಾನ. ಅವರೀಗ 'ತಮ್ಮ ಹೆಂಡತಿ ಯಾಗುವವಳು ನೌಕರಿ ಮಾಡುವುದು ಬೇಡ, ತಮ್ಮ ಸಂಪಾದನೆಯೇ ಬೇಕಾದಷ್ಟಿರುವುದರಿಂದ ಅವಳು ಹಾಯಾಗಿ ಮನೆಯಲ್ಲಿ ಕೂತು ನಮಗೆ ಅನುಕೂಲವಾಗುವಂತೆ ನಗುನಗುತ್ತಾ ಕಾಲಕಳೆದರೆ ಸಾಕು.' ಎನ್ನತೊಡಗಿದ್ದಾರೆ. ಅವಳು ಟೆಕ್ನಿಕಲ್ ಶಿಕ್ಷಣದ ಪರಮಾವಧಿ ಡಿಗ್ರಿಯನ್ನು ಪಡೆದಿರುವುದೂ ಅಗತ್ಯ. ಅದು ಪ್ರತಿಷ್ಠೆಯ ಗುರುತಿಗೆ. ಸಾಮಾನ್ಯ ಪದವಿಯ ಹೆಣ್ಣಾದರೆ ಸಾಕಾಗದು. ಹೇಳಿಕೊಳ್ಳಲು ಜಂಬದ ಮಾತಿರುವುದಿಲ್ಲವಲ್ಲ. ಉನ್ನತ ಶಿಕ್ಷಣವಿರಬೇಕು, ಮನೆಯಲ್ಲೇ ಉಳಿಯಲೂ ಬೇಕು. ಈ ಮಾತಿಗೆ ದೊಡ್ಡದೊಡ್ಡ ಓದುಗಳನ್ನು ಓದಿದ ಹುಡುಗಿಯರೂ ಒಪ್ಪಿಕೊಳ್ಳುತ್ತಿರುವುದೊಂದು ವಿಪರ್ಯಾಸ. ಐಷಾರಾಮದ ಬದುಕಿನ ಆಮಿಷದ ಹಿನ್ನೆಲೆಯಲ್ಲಿ ಅಡಗಿರುವ ಅಪಾಯವನ್ನು ಮನಗಾಣದೆ ಕಷ್ಟಪಟ್ಟು ಆರ್ಜಿಸಿದ ಡಿಗ್ರಿಗಳನ್ನು ಕಸದ ಬುಟ್ಟಿಗೆ ಎಸೆದು, ಸಾಧನೆಯ ಸ್ವಾವಲಂಬನೆಯ ಮಾರ್ಗದಲ್ಲಿ ತಮ್ಮ ವ್ಯಕ್ತಿತ್ವವನ್ನೇ ಅಡ್ಡಗಲ್ಲಾಗಿ ಇಟ್ಟು ಅರ್ಥವಿಲ್ಲದ ಸುಖದ ಕನಸನ್ನು ನಂಬಲು ಹೊರಟಿದ್ದಾರೆ.

ಕುಟುಂಬವು ಈ ಮೊದಲು ತನ್ನ ಸದಸ್ಯರಿಗೆ ನಿರಂತರವಾಗಿ ಆಸರೆಯಾಗುವ ಭರವಸೆಯದಾಗಿತ್ತು. ಹೆಚ್ಚಿನ ಮುಂದಾಲೋಚನೆ ಮಾಡಲಾಗದವರೇ ಆಗಲಿ, ಸ್ವಂತ ವ್ಯಕ್ತಿತ್ವಕ್ಕಾಗಿ ಹವಣಿಸದವರೇ ಆಗಲಿ, ಕೊನೆಗೆ ದುರ್ಬಲರೋ ಅಂಗವಿಕಲರೋ ಆಗಿದ್ದರೂ ಕೂಡ, ಹೆಚ್ಚಿನ ತೊಂದರೆಗಳಿಗೆ ಸಿಲುಕದಂತೆ ಅವರನ್ನು ಕುಟುಂಬವೇ ಸಂರಕ್ಷಿಸುತ್ತಿತ್ತು. ಬರಬರುತ್ತಾ ಈಗಿನ ಪ್ರಪಂಚದಲ್ಲಿ ಕುಟುಂಬಗಳಿಗೆ ಈ ಧಾರಣಾಶಕ್ತಿ ಅಷ್ಟಾಗಿ ಇಲ್ಲವೇನೋ ಎನಿಸುತ್ತಿದೆ. ವ್ಯಕ್ತಿಗಳು ಒಂಟಿತನಕ್ಕೆ ಸಿಲುಕುತ್ತಾ, ಅವರವರ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಹೊಣೆಗಾರಿಕೆಯೂ ಅವರವರದೇ ಆಗುತ್ತಿದೆ. ಈ ಹೊಸ ಸಂದರ್ಭವನ್ನು ನಮ್ಮ ಹೆಣ್ಣುಮಕ್ಕಳು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಕುಟುಂಬದ ಇತರ ಸದಸ್ಯರ ಹಿತಾಸಕ್ತಿಗಳನ್ನು ಕಾಯುತ್ತಿರುವಾಗಲೂ ತನ್ನನ್ನು ಆವರಿಸಬಹುದಾದ ಅಪಾಯಗಳಿಂದ ರಕ್ಷಿಸಿಕೊಳ್ಳುವ ಜಾಣತನವನ್ನೀಗ ಅವಳು ರೂಡಿಸಿಕೊಳ್ಳಲೇಬೇಕಿದೆ. ಸ್ವಾವಲಂಬನೆಯ ವಿಶ್ವಾಸ ಇಂದು ಅವಳ ಮೊದಲ ಅಗತ್ಯ ವಾಗಿದೆ. ಅದನ್ನು ಗಳಿಸುವ, ಉಳಿಸಿಕೊಳ್ಳುವ ಹಾಗೂ ಬಳಸುವ ಬಗ್ಗೆ ಅವಳು ಹೆಚು ಜಾಗ್ರತಳಾಗದಿದ್ದರೆ ಮಾತ್ರ ಹೆಣ್ಣಿನ ಬದುಕು ಒಂದು ಹುಣ್ಣು ಎಂಬ ನೋವಿಗೆ ಅವಕಾಶ ವಿಲ್ಲದಂತೆ ಸುಂದರವಾದ ಬದುಕನ್ನು ನಡೆಸಬಹುದು.

●

[illegible]

ಎಲ್ಲೆಡೆಯು ಹರಸಿ
ನಿರ್ಗಮಿಸುತ್ತಿದೆ ಕಳೆ
ಆವರಿಸಿರುವ ಬೆಳೆಕಾಣದಂತೆ ಕಳೆಯು
ಎಚ್ಚೆತ್ತು ಚಿಗುರಲ್ಲೆ
ಚಿವುಟ ಬೇಕು
ಕನಸಿನುಯ್ಯಾಲೆಯಲಿ ವಾಸ್ತವವ
ಮರೆತರೆ ಪಾರ್ಥೆನಿಯಂನಂತೆ
ಹರಡುವುದು ನೆನೆಯಬೇಕು
ಉಗುರಲ್ಲೆ ಕಳೆ ಚಿಗುರ ಚಿವುಟಿ
ಬಿಸಿಲಿಗೆ ಹಾಸಿ
ಹಿಡಿಯೋಣ ಏಕತೆಯಲಿ
ಸಫಲತೆಯ ಕಹಳೆ
ಕಹಳೆ ಊದಿದಾಗ
ನಾಡಿಗೊಂದು ಕಳೆ

○ *"ಗೊರೂರು ಪಂಕಜ"*
ಹಾಸನ ಜಿಲ್ಲೆ

ನಾನು ಗೃಹಲಕ್ಷ್ಮಿ!

○ *ಪಾರ್ವತಿ ಜಿ. ಐತಾಳ್*

ಎಲ್ಲಿಯವಳು ನೀನು ಇರುವುದೆಲ್ಲಿ ಎಂದು ಕೇಳಲು
ಬರುವ ನೆನಪು ತಕ್ಷಣವೆ ಅಡುಗೆಮನೆಯ ಬಾಗಿಲು
ಗಾಳಿ ಬೆಳಕು ಆಡದಿರುವ ಕತ್ತಲೆಯ ಕೋಣೆ
ಉಸಿರು ಕೂಡ ಆಡಗೊಡದ ನಿಷ್ಕರುಣ ಸೆರೆಮನೆ

ಬೆಳಗೆ ಮುಂಚೆ ಏಳುವೆನು ಕಾಫಿಯನ್ನು ಮಾಡಲು
ಸೆರಗು ಬಿಗಿದು ಹೊರಡುವೆನು ಒಲೆಯನ್ನು ಉರಿಸಲು
ಪಾತ್ರೆಯಲ್ಲಿ ಇಟ್ಟ ನೀರು ಕೊತಕೊತನೆ ಕುದಿಯಲು
ನೊಂದ ಮನಸು ತುಂಬ ಬರೇ ಮಸಿಕೆಂಡ ಇದ್ದಲು

ದೋಸೆ ಚಟ್ನಿ ಸಾಂಬಾರು ಸಾರು ಪಲ್ಯ ಅನ್ನ
ಧಾರೆಯಿಳಿವ ಬೆವರಿನಿಂಧ ಮೈಯತುಂಬ ಸ್ನಾನ
ಸುತ್ತ ಮುತ್ತ ಇದ್ದ ಕೊಳೆಯ ಒರೆಸಿ ಮಾಡಿ ಶುದ್ಧ
ತಟ್ಟೆ ಲೋಟ ತೊಳೆದು ಇಟ್ಟು ತಿಂಡಿ ಊಟ ಸಿದ್ಧ

ಮನೆಯ ಮಂದಿ ಎಲ್ಲ ಬಂದು ತಟ್ಟೆ ಮುಂದೆ ಹಾಜರು
ಖಾರ ಹೆಚ್ಚು ಉಪ್ಪು ಕಡಿಮೆ ಹುಳಿ ಮುಂದೆ ಎನುವರು
ಚಪ್ಪರಿಸುತ ಕೆಲವೊಮ್ಮೆ ಖುಶಿಯಿಂದ ತಿನುವರು
ಕೆಲವೊಮ್ಮೆ ಬೇಡವೆಂದು ಮುಖವ ತಿರುಗಿಸುವರು

ಹೊಗಳಿಕೆಯು ಟೀಕೆಯಲ್ಲ ನನಗೆ ಮಾತ್ರ ಒಂದೇ
ನಗು ನಗುತ ಬಡಿಸುವುದು ನನ್ನ ಕೆಲಸವೆಂದೇ
ಕರೆಯುವರು ನನ್ನನೆಲ್ಲ ಗೃಹಲಕ್ಷ್ಮಿ ದೇವತೆ
ತಿಳಿಯುವರು ಎಲ್ಲರೂ 'ಗೃಹಿಣೀ ಗೃಹಮುಚ್ಯತೇ'

ಏರು ಇಳಿತ ಇಲ್ಲದಿರುವ ಇದುವೆ ನನ್ನ ದಿನಚರಿ
ತೊಡಗಿ ಎಷ್ಟು ದಿನಗಳೋ ಇಲ್ಲ ನನಗೆ ಖಾತರಿ
ಎಷ್ಟು ಕಾಲ ಇರಲಿ ಹೀಗೆ ಮೂಗಿ ಮೂರ್ಖಳಂತೆ
ನನ್ನತನವ ಮರೆತುಬಿಟ್ಟು ಅದುವೆ ನನಗೆ ಚಿಂತೆ.

ಕಳೆದು ಹೋಗಬೇಡ ಗೆಳತಿ

○ *ಪ್ರೇಮಾವತಿ*

ಬದುಕು
ಸಾಗುತ್ತಲಿರುವ
ಹಾದಿಯಲ್ಲಿ ಗೆಳತೀ
ನೀ ಪಡೆದದ್ದು
ಮೇಲು - ಕೀಳು
ಗೊಂದಲ - ಗೋಜಿನಲ್ಲದ
ನಲ್ಮೆಯ ಬಾಳ ಸಂಗಾತಿ
ಬದುಕು ಬಯಸುವ ಜೀವಕುಡಿಗಳು
ಸುಖ - ಸಂತೃಪ್ತಿ ನೆಮ್ಮದಿಗಿಲ್ಲ ಬರ

ತೃಪ್ತಿಯ ಬೆನ್ನಹಿಂದೆಯೇ
ಅತೃಪ್ತಿಯ ಛಾಯೆ
ಬರಿದಾಗುವ ಖಿನ್ನತೆ
ನಿಗೂಢವಾಗಿ ನನ್ನ
ಕಾಡುವುದ ನಾಬಲ್ಲೆ ಗೆಳತೀ
'ನೀ' ಅಡಗಿರುವುದು ಅಲ್ಲೆ
ಖಿನ್ನತೆಯ ಆಳದಲ್ಲಿ
ನಿನ್ನಂತರಂಗದ ಒಂಟಿತನದಲ್ಲಿ
ಕರಗಿ ಹೋಗಬೇಡ ಗೆಳತಿ

ನಿನ್ನ ದುಗುಡ - ದುಮ್ಮಾನಗಳಿಗೆ
ಶಬ್ದ, ಧ್ವನಿ, ಸಂವೇದನೆ ನೀಡು
ಕವನದ ಸಾಲಾಗಿಸು ಗೆಳತೀ
'ನೀ' ಕಳೆದು ಹೋಗಬೇಡ.

'ಬದುಕಲು ಮರೆತ ಸ್ತ್ರೀ' - ಒಂದು ಅನಿಸಿಕೆ

○ ಜಿ. ವಿ. ವೇದವಲ್ಲಿ

'ಬದುಕಲು ಮರೆತ ಸ್ತ್ರೀ' ಮೆಟ್ಟೂರ್ ರಾಮನ್‌ನಾಯರ್‌ರವರ ಮಲಯಾಳಂ ಕಾದಂಬರಿಯಲ್ಲಿ ಬರುವ ಎರಡು ಪ್ರಮುಖ ಪಾತ್ರಗಳು ಸ್ತ್ರೀಯರದು. ಇಬ್ಬರು ಪುರುಷನ ಪ್ರೀತಿಯಿಂದ ವಂಚಿತರು. ಇವರಿಬ್ಬರು ನೋಡುವ ದೃಷ್ಟಿಕೋನ ಬೇರೆಯಾಗಿದ್ದರೂ, ಈ ವಿಭಿನ್ನ ದೃಷ್ಟಿಕೋನಕ್ಕೆ ಕಾರಣನಾದ ಪುರುಷನು ಒಬ್ಬನೇ ಎನ್ನುವುದು ಕಾದಂಬರಿಯ ಪ್ರಮುಖ ತಿರುವು.

ಬದುಕು ಮೂರು ದಿನದ ಆಟ. ಬಾಲ್ಯ, ಯೌವನ, ವೃದ್ಧಾಪ್ಯ ಬದುಕಲ್ಲಿ ಯೌವನ ಅತ್ಯಂತ ಅಮೂಲ್ಯವಾದದ್ದು. ಅದನ್ನು ಕತ್ತಲೆಯ ಕೋಣೆಯಲ್ಲಿ ಕೊಳೆತು ನಾರುವಂತೆ ಮಾಡುತ್ತಾಳೆ ಭಾಮ. ಭಾಮಳಿಗೆ ಚಂದ್ರುವಿನ ಪ್ರೀತಿಯನ್ನು ಅಮರವಾಗಿಸುವ ಹುಚ್ಚು.

ಚಂದ್ರು ತನ್ನ ಪವಿತ್ರವಾದ ಪ್ರೇಮಕ್ಕೆ ಅರ್ಹನೆ ಎಂದು ಯೋಚಿಸುವುದಿಲ್ಲ. ಅವನ ಹಿನ್ನೆಲೆಯನ್ನು ವಿಚಾರಿಸದೇ, ಅವನ ಎರಡು ವರ್ಷದ ಸ್ನೇಹಕ್ಕೆ ತನ್ನ ಇಪ್ಪತ್ತೈದು ವರ್ಷಗಳನ್ನು ಒತ್ತೆ ಇಡುವ ಅಮಾಯಕಿ. ತನ್ನ ಮಧುರ ಕಂಠಸಿರಿಯನ್ನು ಅವನಿಲ್ಲದಿದ್ದಕ್ಕಾಗಿ ಮರೆಸೋ ತ್ಯಾಗಿ.

ತ್ಯಾಗಿ, ಕರುಣಾಮಯಿ, ಸಹನಮೂರ್ತಿ, ಕ್ಷಮಯಾಧರಿತ್ರಿ, ಮಾಯಾ ಸ್ಫೂರ್ತಿ ಎಂಬ ಬಿರುದು ಬಾವುಲಿಗಳನ್ನು ಕೊಡುವ ಸಮಾಜಕ್ಕೆ ಮಾರುಹೋಗಿ ತನ್ನ ತನವನ್ನು ಕಳೆದುಕೊಂಡ ಸ್ತ್ರೀ ಭಾಮಾ. ಆದರೆ ಈ ಪೊಳ್ಳು ಬಿರುದುಗಳಿಗೆ ಜೋತು ಬೀಳದೆ, ತನ್ನ ತನವನ್ನು ಉಳಿಸಿಕೊಂಡು ಸಮಾಜಕ್ಕೆ ಅಂಜದೆ ದಿಟ್ಟ ಹೆಜ್ಜೆಯನ್ನಿಡುವ ಸ್ತ್ರೀ ಕನಕ.

ಭಾಮಳ ಬದುಕಿನಲ್ಲಿ ಪ್ರವೇಶಿಸುವ ಎರಡನೇ ವ್ಯಕ್ತಿ ರಾಜು. ತನ್ನ ಚಂದ್ರುವಿಗೆ ಮೋಸ ಮಾಡಬಾರದೆಂಬ ಅವಳ ಕಠಿಣ ವ್ರತದಂತಿರುವ ಅವಳ ಮನಸ್ಸನ್ನು, ಅವಳ ತಾಯಿ, ಅಣ್ಣ, ಗೆಳತಿಯರು ಕಡೆಗೆ ರಾಜು ಯಾರೂ ಬದಲಿಸಲಾರರು. ಆದರೆ, ಕೆಲವೇ ಗಂಟೆಗಳಲ್ಲಿ ಅವಳು ಭ್ರಮಲೋಕವನ್ನು ಕೊಡವಿಕೊಂಡು ಹೊರಬರುವಂತೆ ಮಾಡುವುದರಲ್ಲಿ ಕನಕ ಯಶಸ್ವಿಯಾಗುತ್ತಾಳೆ.

ಚಂದ್ರು ಕನಕಳಿಗೆ ಒಂದು ಮಗುವನ್ನು ಕೊಟ್ಟು ನಯವಾಗಿ ವಂಚಿಸಿ ಭಾಮಳನ್ನು ಭ್ರಮೆಯ ಗೂಟಕ್ಕೆ ನೇತುಹಾಕಿ ಇವರಿಬ್ಬರ ಬಾಳಿನಲ್ಲೂ ನೆಮ್ಮದಿ ಕಲಕಿ ಆಟವಾಡುತ್ತಾನೆ. ಭಾಮಳ 'ಅಮರ ಪ್ರೇಮ' ಅರ್ಥವಿಲ್ಲದೆ ವ್ಯರ್ಥವಾಗುತ್ತಿದೆ. ಅದನ್ನು ಭಾಮ ಅರಿಯವಷ್ಟರಲ್ಲಿ ಅವಳ ಸುಂದರ ಇಪ್ಪತ್ತೈದರ ಹರೆಯ ಕರಗಿ ಹೋಗಿರುತ್ತದೆ. ಹರೆಯದ ಲೈಂಗಿಕತೆಯ ಅನುಭವ ನಲವತ್ತರ ಪ್ರಾಯ ಕೊಡಬಲ್ಲದೆ? ತನ್ನ ಭ್ರಮೆಯ ಲೋಕದಲ್ಲಿ ವಿಹರಿಸುತ್ತಾ, ಮೋಸದ ಬಲೆಯ ವಾಸ್ತವಕ್ಕೆ ಕಣ್ಣು ತೆರೆಯದೆ, ಭಾಮ ಬದುಕವುದನ್ನೇ ಮರೆಯುತ್ತಾಳೆ. ಕನಕಳ ವಾಸ್ತವ ಬದುಕು ಭಾಮಳ ಭ್ರಮೆಯನ್ನು ಹರಿಯುತ್ತದೆ. 'ಬದುಕಲು ಮರೆತ ಸ್ತ್ರೀ' ಬಹುಪಾಲು ಸ್ತ್ರೀಯರು ಭ್ರಮಾಲೋಕದಲ್ಲಿ ಬದುಕುತ್ತಿರುವ ವಾಸ್ತವತೆಯನ್ನು ಬಿಂಬಿಸುತ್ತದೆ. ಇಂತಹ ಅಪೂರ್ವ ಕೃತಿಯನ್ನು ಹುಡುಕಿ ಕನ್ನಡಕ್ಕೆ ಅನುವಾದಿಸಿದ ಪಾರ್ವತಿಯವರು ಅಭಿನಂದನಾರ್ಹರು.

●

ಪುರುಷರ ಮತ್ತು ಸ್ತ್ರೀಯರ ನಡುವಿನ ಜನಸಂಖ್ಯೆ ಪ್ರಮಾಣವನ್ನು ಹೋಲಿಸಿದಾಗ ಮಹಿಳೆಯರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಾ ಬಂದಿದೆ. ೧೯೦೧ರಲ್ಲಿ ಒಂದು ಸಾವಿರ ಪುರುಷರ ಸಂಖ್ಯೆಗೆ ೯೭೨ ಮಹಿಳೆಯರು ಇದ್ದರೆ, ೧೯೯೧ರಲ್ಲಿ ಹೋಲಿಸಿ ನೋಡಿದಾಗ ಮಹಿಳೆಯರ ಸಂಖ್ಯೆ ೯೨೭ಕ್ಕೆ ಇಳಿದಿರುವುದು ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣ ಗಂಡು ಮಕ್ಕಳಿಗೆ ಪ್ರಾಧಾನ್ಯತೆ ನೀಡುವುದು ಮತ್ತು ವಿದ್ಯಾಭ್ಯಾಸದಲ್ಲಿ ಹೆಣ್ಣು ಮಕ್ಕಳಿಗೆ ವಂಚನೆಯನ್ನು ಮಾಡುವುದರ ಜೊತೆಗೆ ಹೆಣ್ಣು ಭ್ರೂಣದ ಹತ್ಯೆಯೇ ಮುಖ್ಯ ಕಾರಣವಾಗಿ ಕಂಡುಬರುತ್ತದೆ.

ಎರಡು ಪ್ರತಿಭಟನಾ ವರದಿಗಳು

○ ಜಯಶ್ರೀ

ಕುಶಾಲನಗರದ ಸಾರ್ವಜನಿಕ ಪ್ರದೇಶಗಳಾದ ಬಸ್‌ಸ್ಟ್ಯಾಂಡ್ ಗೋಡೆ, ಶಾಲಾ ಕಾಲೇಜುಗಳ ಗೋಡೆ, ಮಹಿಳಾ ಸಮಾಜದ ಗೋಡೆ ಹೀಗೆ ಎಲ್ಲೆಂದರಲ್ಲಿ ರಾರಾಜಿಸುತ್ತಿರುವ ಅಶ್ಲೀಲ ಭಿತ್ತಿಚಿತ್ರಗಳ ವಿರುದ್ಧ ಇಲ್ಲಿನ ಮಹಿಳಾ ಸಂಘಟನೆಗಳು ಜಿಲ್ಲೆಯಲ್ಲೇ ಪ್ರಪ್ರಥಮ ಬಾರಿಗೆ ಬೀದಿಗಿಳಿದು ಪ್ರತಿಭಟನೆ ನಡೆಸಿದವು.

ಮಹಿಳೆಯರಿಗೆ, ಮಕ್ಕಳಿಗೆ ಸಾರ್ವಜನಿಕರೆಲ್ಲರಿಗೂ ಮುಜುಗರವನ್ನುಂಟುಮಾಡುವ ಮತ್ತು ಪ್ರಮುಖವಾಗಿ ಮಹಿಳೆಯರಿಗೆ ಅವಮಾನವನ್ನುಂಟುಮಾಡುವಂತಹ ಅಶ್ಲೀಲ ಭಿತ್ತಿ ಚಿತ್ರಗಳು ಇತ್ತೀಚಿನ ದಿನಗಳಲ್ಲಿ ನಗರದಲ್ಲಿ ಒಮ್ಮಿಂದೊಮ್ಮೆಯೇ ಹೆಚ್ಚಿರುವ ಹಿನ್ನೆಲೆಯಲ್ಲಿ ಇಲ್ಲಿನ 'ಜಾಗೃತ ಮಹಿಳಾ ವೇದಿಕೆ', ಭಗವತಿ ಮಹಿಳಾ ಸಂಘ, ಪ್ರಿಯದರ್ಶಿನಿ ಮಹಿಳಾ ಸಂಘ ಸೇರಿ ಸ್ಥಳೀಯ ಠಾಣಾಧಿಕಾರಿಗೆ ಲಿಖಿತ ದೂರು ನೀಡಿ ಅಶ್ಲೀಲ ಭಿತ್ತಿಚಿತ್ರ ಅಂಟಿಸುವುದರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಮನವಿ ಮಾಡಿಕೊಂಡಿತು.

ಮನವಿ ಮಾಡಿಕೊಂಡ ಮರುಕ್ಷಣದಲ್ಲೇ ಠಾಣಾಧಿಕಾರಿಗಳು ಕಾರ್ಯಪ್ರವೃತ್ತರಾಗಿ ಇಲ್ಲಿನ ವೀಡಿಯೋ ಕೇಂದ್ರಗಳು ಹಾಗೂ ಸಿನಿಮಾ ಮಂದಿರಗಳ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ ತತ್‌ಕ್ಷಣದಿಂದಲೇ ಇಂತಹ ಭಿತ್ತಿಚಿತ್ರಗಳನ್ನು ಅಂಟಿಸುವುದನ್ನು ನಿಲ್ಲಿಸುವಂತೆ ಮಾಡಿಸಿರುವುದು ಪೊಲೀಸ್ ಇಲಾಖೆಗೆ ಸಾರ್ವಜನಿಕ ಹಿತಾಸಕ್ತಿಯಲ್ಲಿರುವ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

ಜನರ ಮನಸ್ಸನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವ ಅತೀ ಆಕರ್ಷಕ ಮಾಧ್ಯಮ ಸಿನಿಮಾ. ಹಣ ಗಳಿಕೆಯ ದೃಷ್ಟಿಯಿಂದ ಕೂಡಾ ಇದು ಪ್ರಮುಖ ಪಾತ್ರ ವಹಿಸುತ್ತದೆ. ಅದಕ್ಕಾಗಿ ನಿರ್ದೇಶಕರು, ನಿರ್ಮಾಪಕರು ಬಹಳಷ್ಟು ಸರ್ಕಸ್‌ಗಳನ್ನು ಮಾಡಿ ಹಗಲು ರಾತ್ರಿ ನಿದ್ರೆಗೆಟ್ಟು ಚಮತ್ಕಾರಗಳನ್ನು ಮಾಡುತ್ತಾರೆ. ಆದರೆ ಯಾವ ಮಾಧ್ಯಮವೇ ಆಗಲಿ ಅದರ ಮೊದಲ ಗುರಿ ಹೆಣ್ಣು. ಆಕೆಯನ್ನು ಲೈಂಗಿಕ ದೃಷ್ಟಿಯಿಂದ ಚಿತ್ರಿಸಿ ತೋರಿಸುವಂತಹ ಕೆಲಸವನ್ನು ಮೊದಲು ಮಾಡುತ್ತಾರೆ. ಎಷ್ಟೋ ಕಲಾತ್ಮಕ ಚಿತ್ರಗಳು ಕೂಡಾ ಇದನ್ನು ಮಾಡಿವೆ.

ಜಾಹಿರಾತು ಪ್ರಕಟಣೆ ಈ ಅರ್ಥ ವ್ಯವಸ್ಥೆಯ ಪ್ರಭಾವಿ ಶಕ್ತಿಯಾಗಿದೆ. ಮನೋರಂಜನೆ ಕಲೆಯ ಅವಿಭಾಜ್ಯ ಅಂಗ ಗಳೆಂಬುದು ನಿಜವಿದ್ದರೂ ಇಂದು ಮನರಂಜನೆಯ ವ್ಯಾಪಾರ ನಡೆದಿದೆ. ಇಂದಿನ ಕಾಲದಲ್ಲಿ ಪ್ರಸಾರ ಮಾಧ್ಯಮದ ತಂತ್ರವು ಎಷ್ಟೊಂದು ಮುಂದುವರಿದಿದೆ ಎಂದರೆ ಅದರ ಎರಡು ಮುಖ್ಯ ಪರಿಣಾಮಗಳು ಎದ್ದು ಕಾಣುತ್ತವೆ. ಒಂದು ಏಕಕಾಲಕ್ಕೆ ಕೋಟಿಗಟ್ಟಲೆ ಜನರಿಗೆ ಸಂದೇಶವನ್ನು ತಿಳಿಸಬಹುದು ಎಂಬುದು. ಅದೇ ರೀತಿಯಲ್ಲಿ ವಿವಿಧ ಇಂದ್ರಿಯಗಳಿಂದ ಈ ಸಂದೇಶವನ್ನು ತಿಳಿದುಕೊಳ್ಳಬಹುದೆಂಬುದು ಎರಡನೆಯದು.

ಇಂದಿನ ಕಾಲಕ್ಕೆ ಸಮಾಜದಲ್ಲಿನ ಆಗುಹೋಗುಗಳ ಮಾಹಿತಿಗಾಗಿ ಜ್ಞಾನ ಸಂಪಾದನೆಗಾಗಿ ಶಿಕ್ಷಣದ ಅವಶ್ಯಕತೆ ಇದೆ. ಅದಕ್ಕೆ ಸಹಾಯಕವಾಗುವಂತೆ ಪ್ರಸಾರ ಮಾಧ್ಯಮಗಳು ಇರಬೇಕಾಗುತ್ತದೆ. ಆದರೆ ಕಲೆಯ ಸಂರಕ್ಷಣೆ, ಅಭಿವೃದ್ಧಿ ಮತ್ತು ಸೃಜನಶೀಲತೆಯ ಆವಿಷ್ಕಾರಗಳು ಅಷ್ಟೊಂದು ಮಹತ್ವವೆನಿಸಧೆ ಕೇವಲ ಮನೋರಂಜನೆ ಅಧಿಕವಾಗುತ್ತಿದೆ. ಮನೋರಂಜನೆಯ ಪ್ರವೃತ್ತಿಯನ್ನು ಹೆಚ್ಚಿಸಲು ಬಹಳಷ್ಟು ಹಣ ವೆಚ್ಚವಾಗುತ್ತದೆ. ಹಣವು ಬಂಡವಾಳವಾಗಿ ಇದಕ್ಕೆ ಪೋಷಕವಾದ ಚಿತ್ರಪಟ ನಿರ್ಮಾಣದಲ್ಲಿ ಸಿಲುಕಿದೆ. ಯಾವ ವರ್ಗದ ಬಳಿ ಹಣವಿದೆಯೋ ಅವರ ಕೈಯಲ್ಲಿ ವ್ಯಾಪರ-ಅವರೇ ಈ ಪ್ರಸಾರ ಮಾಧ್ಯಮವನ್ನು ಯಾವ ರೀತಿ ಉಳಿಸಬೇಕೆಂಬುದನ್ನು ನಿರ್ಧರಿಸಲು ಶಕ್ತರು. ಮಾನವತೆ, ಕಲೆ, ಕಲೆಯ ಮೌಲ್ಯ ಇವನ್ನು ಅಳವಡಿಸಿಕೊಂಡು ಈ ಸಂಸ್ಕೃತಿ ರೂಪುಗೊಳ್ಳಬೇಕು. ಹಣ ಗಳಿಕೆಯ ದೃಷ್ಟಿಕೋನ ದಲ್ಲಿ ಮಾಧ್ಯಮಗಳನ್ನು ಬಳಸಲಾಗುತ್ತದೆ. ಸ್ತ್ರೀಗೂ ಅವಳದೇ ಆದ ವ್ಯಕ್ತಿತ್ವವಿದೆ ಎಂಬುದನ್ನು ಸಂಪೂರ್ಣ ಮರೆತು ಆಕೆ ಅಲ್ಲಿ ಪುರುಷ ದೃಷ್ಟಿಯ ಸ್ತ್ರೀಯಾಗುತ್ತಾಳೆ.

ಈ ಪರಿಸ್ಥಿತಿಯಿಂದ ಪಾರಾಗಲು ಪ್ರಸಾರ ಮಾಧ್ಯಮವನ್ನು ಸೂಕ್ಷ್ಮವಾಗಿ ಚಿಕಿತ್ಸಕ ಬುದ್ಧಿಯಿಂದ ಗಮನಿಸಿ, ಸ್ತ್ರೀಯ ವ್ಯಕ್ತಿತ್ವವನ್ನು ಕಲುಷಿತಗೊಳಿಸುವ ಪ್ರಚಾರ ಎಲ್ಲೆಲ್ಲಿ ನಡೆದಿದೆಯೋ ಅದರ ಬಗ್ಗೆ ಸ್ತ್ರೀಯರಲ್ಲಿ ಜಾಗೃತಿ ಉಂಟಾಗಬೇಕು. ಸ್ತ್ರೀಯರೆಲ್ಲಾ ಸಂಘಟಿತರಾಗಿ ಪ್ರತಿಭಟಿಸುವುದರ ಜೊತೆಗೆ ಸರಕಾರ ಸ್ತ್ರೀಯನ್ನು ಅಶ್ಲೀಲವಾಗಿ ಚಿತ್ರಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಕೊಳ್ಳಬೇಕು. ●

ಮನೆ ಕೆಲಸದಿಂದ ಮುಕ್ತಿ

ಗ್ರಾಮೀಣ ಮಹಿಳೆಯರು ಇನ್ನೂ ಅಂಧಕಾರ, ಅಜ್ಞಾನದಲ್ಲಿಯೇ ಮುಳುಗಿದ್ದೂ ಅವರಿಗೆ ಶಿಕ್ಷಣದ ಬಗ್ಗೆ ಮಾರ್ಗದರ್ಶನ ಅಗತ್ಯ. ಗ್ರಾಮೀಣ ಮಹಿಳೆ ಪ್ರತಿದಿನ ದುಡಿದರೂ ದುಡಿಮೆಗೆ ತಕ್ಕ ಸಂಬಳ ಬರುವುದಿಲ್ಲ. ಬಿಸಿಲಿರಲಿ ಮಳೆ ಇರಲಿ ಪ್ರತಿ ದಿನವೂ ಕೂಲಿ ಮಾಡಲು ಹೋಗಲೇಬೇಕು. ತಾವು ಕೂಲಿಗೆ ಹೋಗುವುದಲ್ಲದೆ ಜೊತೆಗೆ ತಮ್ಮ ಮಕ್ಕಳನ್ನೂ ಸಹಾಯಕ್ಕಾಗಿ ಕರೆದುಕೊಂಡು ಹೋಗುತ್ತಾರೆ.

ಈ ಮೇಲಿನ ಸ್ಥಿತಿಯಲ್ಲೇ ತನ್ನ 5 ಜನ ಹೆಣ್ಣು ಮಕ್ಕಳೊಂದಿಗೆ ಜೀವನ ನಿರ್ವಹಣೆ ಮಾಡುತ್ತಿರುವ ಕುಶಾಲನಗರದ ರಾಣಿ ಜಿ. ಪಂ. ಸದಸ್ಯರಾದ ಶಶಿಧರ್‌ನ್ನು ಭೇಟಿಯಾಗಿ ಹೇಗಾದರೂ ಮಾಡಿ ನನ್ನ ಮಗಳನ್ನು ಅವಳ ಮನೆ ಯಜಮಾನರ ಕೈಯಿಂದ ಬಿಡಿಸಿ ಕೊಟ್ಟು ಮಗಳ ಜೀವ ಉಳಿಸಿ ಎಂದು ಅಂಗಲಾಚಿದಳು.

ಇವಳ ಈ ನೋವಿಗೆ ತತ್‌ಕ್ಷಣವೆ ಸ್ಪಂದಿಸಿದ ಶಶಿಧರ್ ಜಾಗೃತ ಮಹಿಳಾ ವೇದಿಕೆಯ ಸದಸ್ಯರನ್ನು ಸೇರಿಸಿಕೊಂಡು ಸುಮಾರು 2 ವರ್ಷದಿಂದ ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರ ಮನೆಯಲ್ಲಿ ಕೆಲಸಕ್ಕಿದ್ದ 12 ವರ್ಷದ ಪುಟ್ಟ ಬಾಲಕಿ ಗೀತಾಳನ್ನು ಬಿಡಿಸಿ ತಾಯಿಗೆ ಒಪ್ಪಿಸಿದ್ದಾಯಿತು.

ಗೀತಾಳ ತಾಯಿ ಶಶಿಧರ್‌ಗೆ ದೂರು ನೀಡಿದ ಕೂಡಲೇ ಅವರು ಮತ್ತು ವೇದಿಕೆಯ ಸದಸ್ಯರು ಸೇರಿ ಇಲ್ಲಿನ ಪೊಲೀಸ್ ವೃತ್ತ ನಿರೀಕ್ಷಕರಾದ ಎಂ. ಎಂ. ದೇಸಾಯಿಯವರಿಗೆ ದೂರು ನೀಡಲಾಗಿ ಬರೀ ಅರ್ಧ ಗಂಟೆಯೊಳಗೆ ಮಗುವನ್ನು ತಾಯಿಗೆ ಒಪ್ಪಿಸುವ ಅದ್ಭುತವಾದ ಕೆಲವನ್ನು ದೇಸಾಯಿಯವರು ಮಾಡಿದರು.

ಇನ್ನು ಮುಂದೆ ಈ ಹುಡುಗಿಯನ್ನು ನಾನು ಎಲ್ಲೂ ಮನೆ ಕೆಲಸಕ್ಕೆ ಕಳುಹಿಸುವುದಿಲ್ಲ. ಅವಳನ್ನು ಶಾಲೆಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡಿ ಕೊಡಿ. ನಾನು ಶಾಲೆಗೆ ಕಳುಹಿಸುತ್ತೇನೆ ಎಂದು ಪೊಲೀಸ್ ಠಾಣೆಯಲ್ಲಿ ಬರೆದುಕೊಟ್ಟ ತಾಯಿ; ಶಶಿಧರ್ ಹಾಗೂ ವೇದಿಕೆಯ ಸದಸ್ಯರು ಮಗುವನ್ನು ಶಾಲೆಗೆ ಸೇರಿಸುವ ಪೂರ್ತಿ ವ್ಯವಸ್ಥೆ ಮಾಡಿ ಹುಡುಗಿಯನ್ನು ಕರೆದು ತರಲು ಮನೆಗೆ ಹೋದರೆ ತಾಯಿ ಇನ್ನೊಂದು ಕಡೆ ಮುಂಗಡ ಹಣ ಪಡೆದು ಮಗುವನ್ನು ಮನೆಕೆಲಸಕ್ಕೆ ಸೇರಿಸಿದ್ದಳು.

ನಮ್ಮ ದೇಶದ ಒಟ್ಟು ಜನಸಂಖ್ಯೆಯ 80% ಜನರಿಗೆ ಅನ್ನ, ನೌಕರಿ ಇಲ್ಲ. ಬಡತನದ ಬೇಗೆ ನೀಗಿಸಿಕೊಳ್ಳುವುದಕ್ಕಾಗಿ, ತಮ್ಮ ಜೀವನ ನಿರ್ವಹಣೆಗಾಗಿ - ಶಾಲೆಯಲ್ಲಿ ಎಲ್ಲಾ ಮಕ್ಕಳೊಡನೆ ಕೂಡಿ ಆಡಬೇಕಾದ ಮಕ್ಕಳನ್ನು ದುಡಿಮೆಗೆ ತಳ್ಳುತ್ತಾರೆ. ಇಂತಹ ಕುಟುಂಬಗಳಿಗೆ ಮಕ್ಕಳ ದುಡಿಮೆ ಅತೀ ಅಗತ್ಯ.

ವಿಶ್ವದ 600 ಕೋಟಿ ಜನರಲ್ಲಿ 130 ಕೋಟಿ ಜನ ಕಡು ಬಡವರು. 140 ಕೋಟಿ ಜನರಿಗೆ ಶುದ್ಧ ನೀರಿನ ಸೌಕರ್ಯವಿಲ್ಲ. 300 ಕೋಟಿ ಜನರಿಗೆ ಸರಿಯಾದ ಪ್ರಾಥಮಿಕ ಸೌಕರ್ಯವಿಲ್ಲ. ಪ್ರತೀ ವರ್ಷ ಒಂದು ಕೋಟಿ ಮಕ್ಕಳು ಸರಿಯಾದ ಚಿಕಿತ್ಸೆ ಇಲ್ಲದೆ ಸಾಯುತ್ತಾರೆ. ೫ ವರ್ಷಕ್ಕೂ ೧೦ ವರ್ಷಕ್ಕೂ ಮಧ್ಯ ಪ್ರಾಯದ ೨೫ ಕೋಟಿಗೂ ಅಧಿಕ ಮಕ್ಕಳು ಶಾಲೆಗೆ ಹೋಗುವ ಬದಲು ಕೆಲಸಕ್ಕೆ ಹೋಗುತ್ತಾರೆ. ಅದರಲ್ಲೂ ಸಮಸ್ಯೆಯ ಸಾಲುಗಳ ನಡುವೆಯೇ ಜನ್ಮ ತಳೆಯುವ ಹೆಣ್ಣು ಜೀವ ತನ್ನ ಬದುಕಿನುದ್ದಕ್ಕೂ ಎದುರಿಸಬೇಕಾಗಿ ಬರುವ ಸವಾಲುಗಳು ಹಲವು. ಅವಳಿಗೆ ನೀಡಬೇಕಾದ ಪ್ರತಿಯೊಂದು ಸುಖ ಸವಲತ್ತುಗಳ ವಿಷಯದಲ್ಲೂ ಸಮಾಜ ಹಲವು ಬಾರಿ ವಿಚಾರ ಮಾಡಿ ಮುಂದುವರಿಯುತ್ತದೆ.

ಮಹಿಳೆಯರಿಗೆ ತಾವು ಬೆಳೆದ ಸಾಮಾಜಿಕ, ಸಾಂಸ್ಕೃತಿಕ ಚೌಕಟ್ಟನ್ನು ಮೀರಿ ತಮ್ಮದೇ ಆದ ಬದುಕನ್ನು ರೂಪಿಸುವ ಛಾತಿ ಛಲವನ್ನು ನೀಡುವ ಅಪರ ಕೌಟುಂಬಿಕ-ಬದುಕು ನಂತರದಲ್ಲಿ ಅವರನ್ನು ನುಚ್ಚುನೂರಾದ ಕನಸುಗಳೊಂದಿಗೆ ದಿನ ನೂಕುವಂತಹ ಪರಿಸ್ಥಿತಿಗೆ ತಳ್ಳುವ ಅಮಾನವೀಯ ಪರಿಸರವನ್ನು ನಾವು ಎಲ್ಲೆಡೆ ಕಾಣುತ್ತೇವೆ. ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲಾಗದೆ ಅಸಹಾಯಕತೆಯಿಂದ ತುತ್ತು ಕೂಳಿಗಾಗಿ ಹೋರಾಡುವ ಪರಿಸ್ಥಿತಿ ಇದೆ. ಇಂಥವರ ಪರಿಸ್ಥಿತಿಗೆ ಮೊಸಳೆ ಕಣ್ಣೀರಿಡುವ ಸರಕಾರಗಳು ಹಲವಾರು ಕಾರ್ಯಕ್ರಮಗಳನ್ನು ಯೋಜಿಸಿ ಜನತೆಯ ಮುಂದಿಟ್ಟು ಪ್ರಜ್ಞಾವಂತರ ಬಾಯಿ ಮುಚ್ಚಿಸುವ ಕೆಲಸ ಮಾಡುತ್ತಾ ಬಂದಿದ್ದು, ತಾವು ಯೋಚಿಸಿದ ಕಾರ್ಯಕ್ರಮಗಳು ಎಷ್ಟು ಪರಿಣಾಮಕಾರಿಯಾಗಿ ಫಲಾನುಭವಿಗಳನ್ನು ಮುಟ್ಟಿವೆ ಎನ್ನುವುದರ ಬಗ್ಗೆ ಯಾವುದೇ ಕಾಳಜಿ ತೋರದೆ ನಿರಾತಂಕವಾಗಿ, ನಿಶ್ಚಿಂತೆಯಿಂದ ಮುಂದುವರಿಯುವ ಸರ್ಕಾರಗಳಿಂದ ನಾವೇನನ್ನಾದರೂ ನಿರೀಕ್ಷಿಸುವುದು ಸಾಧ್ಯವೇ ಎಂದು ಯೋಚಿಸಬೇಕಾಗಿದೆ.

ಮಾನಸದ ಪ್ರಕಟಣೆ ಮಾನಸದ ಓದುಗರ ಆರ್ಥಿಕ ನೆರವನ್ನು ಅವಲಂಬಿಸಿದೆ. ಓದುಗರು ಚಂದಾ ನವೀಕರಣದ ಸೂಚನೆ ಬಂದ ಕೂಡಲೇ ಚಂದಾ ನವೀಕರಿಸಿ ಸಹಕರಿಸಬೇಕೆಂದು ಕೋರುತ್ತೇವೆ.

ಸಂ. ಮಂಡಳಿ

ಗುರಿ ಮತ್ತು ದಾಹ ನಿವಾರಕಗಳು

○ ಚಿತ್ರಾ ಎಸ್.

೧

ಏಳು ಎದ್ದೇಳು
ಓಡು ದೌಡಯಿಸು
ಆಚೀಚೆ ನೋಡದೆ
ಹಿಂದೆ ತಿರುಗದೆ
ನೇರ ಸೀದ
ಓಡು, ಇನ್ನೂ ವೇಗವಾಗಿ
ಹೆಜ್ಜೆ ಹೆಜ್ಜೆಗೂ ಎಚ್ಚರ
ದಿಟ್ಟ ಮನಸ್ಸು ದಾಪುಗಾಲು
ಮೈಯ ತುಂಬಾ ಕೆಚ್ಚು

೨

ಆಹಾ! ಸಂಪಿಗೆ ಸೂಸುವ ಸುವಾಸನೆ?
ಓ ಮೈ ಮರೆಯಬೇಡ
ಪುಟ್ಟ ಬಾಟಲಿಯಲಿ ತುಂಬಿಕೋ,
ಅರೆ! ಮುತ್ತು ಪೋಣಿಸಿದೆ ಮಂಜು?
ಹುಂ ಕ್ಲಿಕ್ಕಿಸಿ ಮುಂದೋಡು
ಹಾದು ತುಂಬಿದವರಿಗೆ?
ಛೆ! ಹಲೋ ಹೇಳಿ ಓಡು

೩

ಇನ್ನೆಷ್ಟುದೂರ?
ಒಬ್ಬನೇ ಒಬ್ಬಳೇ
ಹಾದಿಗೆ ಏನಾದರುಂಟಾ?

ಕೈಗೆಟುಕುವ ದೂರದಲ್ಲಿ ದಾಹನಿವಾರಕಗಳು
ಬಾಟಲಿಗಳಲಿ ಪಾಕೆಟ್ಟುಗಳಲಿ
ಗಣಕಯಂತ್ರದ ಗರ್ಭಗಳಲ್ಲಿ
ಕುಟುಂಬ-ಕ್ಲಬ್ಬು, ದಾನ ಧರ್ಮ
ವಂದೇ ಮಾತರಂ, ಮಾತ ಪಿತರಂ
ಹೈಸ್ಪೀಡ್ ಕಾರು, ವಿಂಟೇಜ್ ಬೈಸಿಕಲ್
ಶೆಲ್ಫಿನಲ್ಲಿ ಪೇರಿಸಿಟ್ಟ
ಬಿಸಿ ಏರಿಸುವ ತಂಪು ಪಾನೀಯಗಳಲ್ಲಿ
ಗಟಗಟನೆ ಕುಡಿದು
ಅಂಟಾಸಿಡ್ ನುಂಗಿ ತೇಗಿ
ಮತ್ತೆ ಓಡಲು ಅಣಿಯಾಗು

೪

ನೆನಪಿರಲಿ
ಗುರಿ ಅಲ್ಲಿದೆ
ಅಲ್ಲಿ ಅಲ್ಲಿ ಬಹುದೂರದಲ್ಲಿ
ಯಾರೂ ಕಾಣದ ಲೋಕದಲ್ಲಿ
ಯಾರಿಗೂ ಸಿಗದ ಸ್ವರ್ಗದಲ್ಲಿ
ಯಾರೂ ನಡೆಯದ ತೋಟದಲ್ಲಿ
ಯಾರೂ ಬರಲಾಗದ ಬಯಲಿನಲಿ
ಓಡಿ ಸೇರು
ಗುರಿ ತಲುಪಬೇಕು
ತ್ವರೆ ಮಾಡು

ಅಯ್ಯೋ ಅಲ್ಲೂ ಇವಿಯೋ ದಾಹ ನಿವಾರಕಗಳು?
ಪ್ರಶ್ನಿಸಬೇಡ, ಗುರಿ ತಪ್ಪೀತು.

ಮೂಲೆಗುಂಪಾದ ಕ್ರಿಶ್ಚಿಯನ್ ಮಸೂದೆಗಳು

ಇತ್ತೀಚೆಗೆ ಕ್ರಿಶ್ಚಿಯನ್ ನಿಯೋಗವೊಂದು ಪ್ರಧಾನ ಮಂತ್ರಿ ವಾಜಪಾಯಿಯವರನ್ನು ಭೇಟಿಯಾಗಿತ್ತು. ಭೇಟಿಯಾದ ಸಂದರ್ಭದಲ್ಲಿ ಹಲವಾರು ವಿಷಯಗಳು ಚರ್ಚಿತವಾದವು. ಹೀಗೆ ಚರ್ಚೆಗೆ ಬಂದ ಹಲವಾರು ವಿಷಯಗಳಲ್ಲಿ ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿರುವ ಕ್ರಿಶ್ಚಿಯನ್ ವೈಯಕ್ತಿಕ ಕಾನೂನಲ್ಲಿನ ಬದಲಾವಣೆಯ ಬೇಡಿಕೆ. ದೆಹಲಿಯ ಆರ್ಚಬಿಷಪ್ "ಈ ಬದಲಾವಣೆಗೆ ಒಪ್ಪಿಗೆ ನೀಡುವುದರ ಮೂಲಕ ಕ್ರಿಶ್ಚಿಯನ್ ಜನಾಂಗಕ್ಕೆ ಹೊಸ ಸಹಸ್ರಮಾನದ ಕೊಡುಗೆಯನ್ನು ನೀವು ಏಕೆ ನೀಡಬಾರದು ಎಂದು ಕೇಳಿದರು. ಆದರೆ ಪ್ರಧಾನ ಮಂತ್ರಿಯವರು ಯಾವ ಪ್ರತಿಕ್ರಿಯೆಯನ್ನು ನೀಡದೆ ಮೌನವಾಗಿದ್ದರು. ಆದರೆ ಆರ್ಚಬಿಷಪ್ ಕೇಳುತ್ತಿದ್ದುದು ಕೊಡಿಗೆಯಲ್ಲ, ವಾಸ್ತವದಲ್ಲಿ ಅದು ಕ್ರಿಶ್ಚಿಯನ್ ಜನಾಂಗದ ಮಹಿಳೆಯರ ಹಕ್ಕು ಹಾಗೂ ನ್ಯಾಯಪರವಾದ ಪ್ರಶ್ನೆ. 1994 ಫೆಬ್ರುವರಿಯಿಂದ ಮೂರು ಮಸೂದೆಯನ್ನು ಮೂಲೆಯಲ್ಲಿಡಲಾಗಿದೆ. ಈ ಮೂರು ಮಸೂದೆಗಳು ಕ್ರಿಶ್ಚಿಯನ್ ಕುಟುಂಬದಲ್ಲಿ ಮಹತ್ವವಾದ ಹಾಗೂ ಸಮಗ್ರವಾದ ಬದಲಾವಣೆಯನ್ನು ಸೂಚಿಸುವಂತಹವು. ಈ ಮಸೂದೆಗಳಿಗೆ ಕ್ರಿಶ್ಚಿಯನ್ ಜನಾಂಗದ ಹಾಗೂ ಚರ್ಚಗಳ ಸಂಪೂರ್ಣ ಬೆಂಬಲವಿದೆ.

ಈ ಮಸೂದೆಗಳು ಕಾನೂನಿನ ಸ್ವರೂಪವನ್ನು ಪಡೆದಾಗ ದೇಶದ ಕ್ರಿಶ್ಚಿಯನ್ ಜನಾಂಗಕ್ಕೆ ಸಂಪೂರ್ಣವಾಗಿ ಅನ್ವಯವಾಗುತ್ತದೆ. ಇತರ ಪ್ರಗತಿಪರ ಕೌಟುಂಬಿಕ ಕಾನೂನುಗಳಂತೆ ಇದು ಸ್ತ್ರೀಪರ ಅಂಶಗಳನ್ನು ಒಳಗೊಂಡಿದೆ.

ಏಳು ವರ್ಷಗಳ ದೀರ್ಘಾವದಿಯಿಂದ ಈ ಮಸೂದೆಗಳು ಮನ್ನಣೆಗಾಗಿ ಕಾಯುತ್ತಲೇ ಇವೆ. ಕಾಂಗ್ರೆಸ್ ಸರ್ಕಾರ, ನಂತರ ಬಂದ ಯನೈಟೆಡ್ ಫ್ರಂಟ್ ಹಾಗೂ ಬಿ.ಜೆ.ಪಿ. ಹೀಗೆ ಎಲ್ಲಾ ಸರ್ಕಾರಗಳು ಈ ಮಸೂದೆಯನ್ನು ನಿರ್ಲಕ್ಷಿಸುತ್ತಲೇ ಬಂದಿವೆ. ಭಾರತದಲ್ಲಿ ಹೆಚ್ಚು ಜನ ಬೆಂಬಲವುಳ್ಳ ಎ.ಪಿ.ಸಿ.ಯು ಈ ಮಸೂದೆಯನ್ನು ಕಾಯಿದೆಯನ್ನಾಗಿಸುವ ಚಳುವಳಿಯನ್ನು ರಾಷ್ಟ್ರಾದ್ಯಂತ ನಡೆಸುವ ಪ್ರಯತ್ನವನ್ನು ಮಾಡುತ್ತಿದೆ.

ಭಾರತದ ಎಲ್ಲಾ ಧರ್ಮದ ವೈಯಕ್ತಿಕ ಕಾನೂನುಗಳು, ಮದುವೆ, ಉತ್ತರಾಧಿಕಾರತ್ವ, ಪರಿಹಾರ, ದತ್ತು ತೆಗೆದುಕೊಳ್ಳುವುದು ಮುಂತಾದ ವಿಚಾರದಲ್ಲಿ ಸ್ತ್ರೀ ವಿರೋಧಿ ಅಂಶಗಳನ್ನು ಒಳಗೊಂಡಿದೆ. 1869ರ ಇಂಡಿಯನ್ ಡೈವೋರ್ಸ್ ಆಕ್ಟ್, 1972ರ ಕ್ರಿಶ್ಚಿಯನ್ ಮ್ಯಾರೇಜ್ ಆಕ್ಟ್ ಬದಲಾವಣೆಯಾಗಬೇಕಾದ ಕಾನೂನುಗಳು., ಮದುವೆ ಎಷ್ಟೇ ಕ್ರೂರ ಹಾಗೂ ಅಮಾನುಷವಾಗಿದ್ದರ ಮದುವೆಯಾಗಿದ್ದರೂ, ಈ ಕಾನೂನಿನಡಿಯಲ್ಲಿ ವಿಚ್ಛೇದನ ಪಡೆಯುವುದು ಸಾಧ್ಯವಿಲ್ಲ ದಂತಾಗಿದೆ.

ಬ್ರಿಟಿಷರು ಭಾರತದಲ್ಲಿ ಇದ್ದ ಕಾಲದಲ್ಲಿ ಈ ಕಾನೂನುಗಳು ಅವರಿಂದ ರಚಿತವಾದವು. ಅಂದು ಬ್ರಿಟಿಷ್ 'ಮದುವೆ'ಗೆ ಸಂಬಂಧಪಟ್ಟಂತೆ ಇದ್ದ ಸಂಪ್ರದಾಯದ ಹಿಂದಿರುವ ಪರಿಕಲ್ಪನೆಯನ್ನು ಆಧರಿಸಿ ಅಂದಿನ ಕಾನೂನುಗಳು ರಚಿತ ವಾಗಿದ್ದವು. ತಮಾಷೆಯೆಂದರೆ ಆ ದೇಶದಲ್ಲಿ ಇಂತಹ ಕಾನೂನಿನಲ್ಲಿ ಮೂಲಭೂತವಾದ ಬದಲಾವಣೆಯನ್ನು ತಂದು ಒಂದು ಶತಮಾನವೇ ಕಳೆದಿದ್ದರೂ, ಭಾರತದಲ್ಲಿ ಈ ಕಾನೂನುಗಳು ನಿಂತ ನೀರಿನಂತೆ ಇದ್ದಲ್ಲೇ ಇವೆ. 80ರ ದಶಕದಿಂದ ಕ್ರಿಶ್ಚಿಯನ್ ಜನಾಂಗದ ವಿವಿಧ ಪಂಗಡಗಳು ಈ ಚರ್ಚೆಯಲ್ಲಿ ಭಾಗವಹಿಸುತ್ತಾ ಬಂದಿದೆ.

ಪ್ರಸ್ತುತದಲ್ಲಿನ ಕಾನೂನಿನಲ್ಲಿ ಬದಲಾವಣೆಯನ್ನು ತರುವಂತೆ ಹಾಗೂ ಹೊಸ ಕ್ರಿಶ್ಚಿಯನ್ ವಿವಾಹದ ಕಾನೂನಿಗಾಗಿ, ಈ ಪಂಗಡದ ಹಲವಾರು ಗುಂಪುಗಳು ಸರ್ಕಾರದ ಮೇಲೆ ಒತ್ತಡವನ್ನು ಹಾಕುತ್ತಲೇ ಬಂದಿದೆ.

ಪ್ರಾರಂಭದಲ್ಲಿ ಕ್ಯಾಥೋಲಿಕ್ ಬಿಷಪ್ ಕಾನ್‌ಫೆರೆನ್ಸ್ ಆಫ್ ಇಂಡಿಯಾ ಹಾಗೂ ರೋಮನ್ ಕ್ಯಾಥೋಲಿಕ್ ಗ್ರೂಪ್ ವಿರೋಧಿಸಿತ್ತು. ಮದುವೆ ಮುರಿದು ಬೀಳದ ಒಂದು ಪವಿತ್ರ ಬಂಧನವಾಗಿತ್ತು. ಈ ಭೂಮಿಯ ಮೇಲೆ ಒಂದು ಬಾರಿ ಮದುವೆ ಏರ್ಪಟ್ಟರೆ ಯಾವುದೇ ಶಕ್ತಿಯು ಅದನ್ನು ಬೇರ್ಪಡಿಸಲು ಸಾಧ್ಯವಿಲ್ಲವೆಂಬ ನಂಬಿಕೆ ಅವರಲ್ಲಿತ್ತು.

1984ರಲ್ಲಿ ಸಂಯುಕ್ತ ಮಹಿಳಾ ವೇದಿಕೆ ಕ್ರಿಶ್ಚಿಯನ್ ವೈಯಕ್ತಿಕ ಕಾನೂನಿನಲ್ಲಿ ಬದಲಾವಣೆಯನ್ನು ತರುವ ಪ್ರಯತ್ನವನ್ನು ಪ್ರಾರಂಭ ಮಾಡಿತು. ವೈಯಕ್ತಿಕ ಕಾನೂನಿನಲ್ಲಿ ಬದಲಾವಣೆಯನ್ನು ಸೂಚಿಸಿ ಒಂದು ಕರಡು ಪ್ರತಿಯನ್ನು ಸಹ ತಯಾರಿಸಿತು. 1990ರ ವೇಳೆಗೆ ಮದುವೆಗೆ, ಉತ್ತರಾಧಿಕಾರತ್ವ ಹಾಗೂ ದತ್ತು, ಇವುಗಳಿಗೆ ಸಂಬಂಧಪಟ್ಟಂತೆ ಮೂರು ಮಸೂದೆಗಳನ್ನು ತಯಾರುಮಾಡಿ ಸಮಾನತೆಯ ಹಿನ್ನಲೆಯಲ್ಲಿ ಹಾಗೂ ಸ್ತ್ರೀಯರಿಗೆ ನ್ಯಾಯ ಒದಗಿಸಿಕೊಡುವ ಹಿನ್ನಲೆಯಲ್ಲಿ

ಕೌಟುಂಬಿಕ ಕಾನೂನಿನಲ್ಲಿ ಸೂಚಿಸಲಾದ ಬದಲಾವಣೆಗಳು ಸಕಾರಾತ್ಮಕವಾದ ಬದಲಾವಣೆಗಳು.

ಪ್ರೊಟೆಸ್ಟೆಂಟ್ ಹಾಗೂ ಸಂಪ್ರದಾಯವಾದಿ ಚರ್ಚ್ ಸಹ ಈ ಹೊಸ ಮಸೂದೆಗೆ ಬೆಂಬಲ ನೀಡುತ್ತದೆ. ಆದರೆ ಕ್ಯಾಥೋಲಿಕ್ ಬಿಷಪ್ ಕಾನ್‌ಫರೆನ್ಸ್ ಆಫ್ ಇಂಡಿಯಾ ಮಾತ್ರ ಈ ಬದಲಾವಣೆಗೆ ತನ್ನ ಸಮ್ಮತಿಯನ್ನು ನೀಡಲಿಲ್ಲ. 1990ರಲ್ಲಿ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಮಹಿಳಾ ಸಮಾವೇಶದಲ್ಲಿ ಈ ಕರಡನ್ನು ಕುರಿತು ವಿವಿಧ ಧಾರ್ಮಿಕ ಮುಖಂಡರೊಂದಿಗೆ ಚರ್ಚಿಸಲಾಯಿತು. ಆದರೆ ಸಿ.ಬಿ.ಸಿ.ಐ. ಮಾತ್ರ ವಿಚ್ಛೇದನಕ್ಕೆ ಸಂಬಂಧಪಟ್ಟಂತೆ ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಿಗೂ ಸಮ್ಮತಿ ನೀಡುವುದೆಂದು ತನ್ನ ನಿಲುವನ್ನು ಸ್ಪಷ್ಟಪಡಿಸಿತು. ಈ ನಿಲುವು ರೋಮನ್ ಕ್ಯಾಥೋಲಿಕ್ ಚರ್ಚನ ನಿಲುವಿಗೆ ಪೂರಕ ವಾಗಿದೆಯೆಂಬ ವಾದವನ್ನು ಸಹ ಮುಂದಿಡಲಾಯಿತು.

ಆದರೆ ಮೂರು ವರ್ಷಗಳ ಕಾಲ ಸತತವಾಗಿ ನಡೆಸಿದ ಚರ್ಚೆಯ ಫಲವಾಗಿ ಸಿ.ಬಿ.ಸಿ.ಐ.ಯೊಂದಿಗೆ ಒಂದು ಒಪ್ಪಂದಕ್ಕೆ ಬರುವುದರ ಮೂಲಕ ಒಂದು ಒಮ್ಮತಕ್ಕೆ ಬರಲು ಸಾಧ್ಯವಾಯಿತು. ಅಂತಿಮವಾಗಿ ವಿಚ್ಛೇದನವನ್ನು ಮದುವೆಯ ಮೇಲೆ ಪ್ರಭಾವ ಬೀರುವ ಸಿವಿಲ್ ಅಂಶಗಳನ್ನು ಕೊನೆಗೊಳಿಸುವುದು ಎಂದು ವ್ಯಾಖ್ಯಾನಿಸಲಾಯಿತು. ಇದು ಮದುವೆಯನ್ನು ಮುರಿಯಲು ಸಾಧ್ಯವಿಲ್ಲವೆಂಬ ಚರ್ಚ್ ನಂಬಿಕೆಗೆ ವಿರೋಧವಾಗಿಲ್ಲವೆಂಬ ನಿಲುವಿನಿಂದ ಈ ಮಸೂದೆಗೆ ಸಮ್ಮತಿ ನೀಡಲಾಯಿತು. 1994ರಲ್ಲಿ ಈ ಮೂರು ಮಸೂದೆಗಳನ್ನು ಅಂದಿನ ಪ್ರಧಾನ ಮಂತ್ರಿ ನರಸಿಂಹರಾವ್‌ರವರಿಗೆ ಸಲ್ಲಿಸಲಾಯಿತು. ಕ್ರೈಸ್ತ ಜನಾಂಗದ ವಿವಿಧ ಧರ್ಮಗುರುಗಳು ವಿವಿಧ ಪ್ರತಿನಿಧಿಗಳೊಂದಿಗೆ ನಡೆಸಿದ ಚರ್ಚೆ, ಸಂವಾದದಿಂದಾಗಿ ಒಂದು ತೀರ್ಮಾನಕ್ಕೆ ಬರಲಾಯಿತು. ಆದರೆ 1996 ಮಾರ್ಚ್‌ನಲ್ಲಿ ಅಂದಿನ ಕಾನೂನು ಮಂತ್ರಿಯಾಗಿದ್ದ ಎಚ್. ಆರ್. ಭರದ್ವಾಜರವರು ಅಲ್ಪಸಂಖ್ಯಾತರ ಒತ್ತಡ ಬರದ ಹೊರತು ವೈಯಕ್ತಿಕ ಕಾನೂನಿನಲ್ಲಿ ಸರ್ಕಾರ ಹಸ್ತಕ್ಷೇಪ ನಡೆಸಲು ಇಚ್ಛೆ ಪಡುವುದಿಲ್ಲ ಎಂದು ನುಡಿದಿದ್ದಾರೆ. ಸರ್ಕಾರ, ಅಲ್ಪಸಂಖ್ಯಾತರ ಆಯೋಗ ಈ ವಿಷಯವನ್ನು ಕುರಿತು ವಿವಿಧ ಜನಾಂಗದ ನಾಯಕರುಗಳನ್ನು ಭೇಟಿಯಾಗಿ ಚರ್ಚೆಯನ್ನು ಮುಂದುವರಿಸಲಾಗುವುದು. ಈ ಮಸೂದೆಯನ್ನು ಕಾಯಿದೆ ಯನ್ನಾಗಿ ಮಾಡುವುದು ಅಲ್ಪಾವಧಿಯಲ್ಲಿ ಮಾಡುವುದು ಸಾಧ್ಯವಿಲ್ಲವೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಅಲ್ಪ ಸಂಖ್ಯಾತ ಆಯೋಗದ ಸದಸ್ಯರಲ್ಲಿ ಒಬ್ಬರಾದ ಬಿ. ಎಸ್. ದಾದಲ್‌ವಾಲಿಯಾರವರು "ಆಯೋಗವು ಈಗಾಗಲೇ ಕ್ರಿಶ್ಚಿಯನ್ ಮಸೂದೆಯನ್ನು ಮಂಡಿಸಿ ಕಾನೂನಿನ ಸ್ವರೂಪವನ್ನು ನೀಡುವಂತೆ ಈಗಾಗಲೇ ಸರ್ಕಾರಕ್ಕೆ ತಿಳಿಸಲಾಗಿದೆಯೆನ್ನುತ್ತಾರೆ.

ಕ್ರಿಶ್ಚಿಯನ್‌ರ ಬೇಡಿಕೆಯಂತೆ ಈ ಕುರಿತು ಚರ್ಚುಗಳು ಪತ್ರದ ಮುಖೇನ ಸರ್ಕಾರಕ್ಕೆ ಒತ್ತಡವನ್ನು ಸಹ ಹಾಕಬೇಕೆಂದು ಅವರು ಹೇಳುತ್ತಾರೆ.

ನಾಲ್ಕು ದಶಕಗಳಿಂದ ಈ ಮಸೂದೆ ಮೂಲೆಗುಂಪಾಗಿ ಕುಳಿತಿದೆ. ಸರ್ಕಾರಗಳು ಬದಲಾಗಿದ್ದರೂ, ಈ ಮಸೂದೆಗೆ ಕಾನೂನು ಸ್ವರೂಪವನ್ನು ನೀಡಲು ಹಿಂಜರಿಯುತ್ತಿವೆ. ಪರಿಣಾಮವಾಗಿ ಕ್ರಿಶ್ಚಿಯನ್ ಸ್ತ್ರೀಯರು ಮೌನವಾಗಿ ರೋಧಿಸುವುದು ಮುಂದುರಿಯುತ್ತಲೇ ಇದೆ.

ಈ ಹಿನ್ನಲೆಯಲ್ಲಿ ಜನವರಿ 15ರಂದು ಕಾನ್ಪುರದಲ್ಲಿ ಭೇಟಿಯಾಗಿದ್ದು, ಎ.ಪಿ.ಸಿ.ಯು ಈ ಸಮಸ್ಯೆಯನ್ನು ಕುರಿತು ದೇಶದಾದ್ಯಂತ ಚಳುವಳಿಯನ್ನು ನಡೆಸಲು ತೀರ್ಮಾನಿಸಿದೆ. ಕ್ರಿಶ್ಚಿಯನ್ ಜನಾಂಗದ ಬಹುತೇಕ ಜನರ ಬೆಂಬಲವಿರುವ ಈ ಕೂಗು ಎನ್.ಡಿ.ಎ. ಸರ್ಕಾರದ ಕಿವಿಗೆ ಕೇಳುವುದೇ, ಕಾದು ನೋಡಬೇಕು?

ಕನ್ನಡಕ್ಕೆ : ರಾಜೇಶ್ವರಿ

"ಹಕ್ಕಿ"

ಹಾರ ಬಿಡಿ, ಹಾರ ಬಿಡಿ
ವಿಶಾಲ ಜಗದೊಳು
ಹಾರುವ ಹಕ್ಕಿ ರೆಕ್ಕೆ
ಕತ್ತರಿಸ ಬೇಡಿ

ಧರ್ಮ, ಸಂಸ್ಕೃತಿ ಆಯುಧದಿ
ರೆಕ್ಕೆ-ಪುಕ್ಕ ಕತ್ತರಿಸಿ
ಬಂಧನದ ಚೂರಿಯಲಿ
ಚುಚ್ಚಿ ಹಿರಿಯಬೇಡಿ!
ಬದುಕು ಬರಡಾಗಿಸಲು ಬೇಡಿ!

ಸಪ್ತವರ್ಣದ ಮೆರುಗನುಟ್ಟು
ನಳ ನಳಿಸುವ ಭಾವನೆಗಳಿಗೆ
ಜೀವ ಕೊಟ್ಟು
ವಜ್ರದರಳಿನಂತೆ ಮಿನುಗಲು
ವಿಹರಿಸುವ ಹಕ್ಕಿಯಂತೆ ಹಾರಲು

ಹಾರ ಬಿಡಿ, ಹಾರ ಬಿಡಿ
ವಿಶಾಲ ಜಗದೊಳು
ಹಾರೊ ಹಕ್ಕಿ ರೆಕ್ಕೆ
ಕತ್ತರಿಸ ಬೇಡಿ

○ ***ಗೊರೂರು ಪಂಕಜ,*** ಹಾಸನ ಜಿಲ್ಲೆ

ಓದುಗರ ಅನಿಸಿಕೆಗಳು

ಮೀಸಲಾತಿಯನ್ನು ಕುರಿತು ಮಾಹಿತಿ ಪೂರ್ಣ ಅಧ್ಯಯನವೊಂದನ್ನು ಪ್ರಕಟಿಸಿದ್ದೀರಿ. ಅದು ತುಂಬಾ ಉಪಯುಕ್ತವಾಗಿದೆ. ಸರಸ್ವತಿ ದು. ಅವರ 'ದಲಿತ ಸ್ತ್ರೀಲೋಕ'ವು ಮನಮುಟ್ಟುವಂತಿದ್ದರೂ ಅದು ಸಮಸ್ಯೆಯ ಒಂದು ಮುಖವನ್ನಷ್ಟೇ ತೋರುತ್ತಿದೆಯೇನೋ ಎನ್ನಿಸಿತು. ಸಮಸ್ಯೆಯ ವಿವಿಧ ಮುಖಗಳ ಪರಿಚಯ ನಿಜಕ್ಕೂ ಅವಶ್ಯಕವಾಗಿದೆ.

- ರೂಪ ಹಾಸನ, *ಹಾಸನ -573 201*

ಈ ಪತ್ರಿಕೆಯಲ್ಲಿ ಕೇವಲ ಮಹಿಳೆಯು ಯಾವ ರೀತಿ ಶೋಷಣೆಗೆ ಒಳಗಾಗುತ್ತಿದ್ದಾಳೆ ಎಂಬುದನ್ನು ಮಾತ್ರ ಪ್ರಕಟಿಸುವಿರಿ. ಇದರ ಜೊತೆಗೆ ಶೋಷಿತ ಮಹಿಳೆ ಎಚ್ಚೆತ್ತುಕೊಳ್ಳಲು ಬೇಕಾದ ಮಾಹಿತಿ ಮಹಿಳೆಯರ ಶಿಕ್ಷಣದ ಮಟ್ಟ ಯಾವ ರೀತಿಯಲ್ಲಿ ಬೆಳೆಯಬೇಕು ಮುಂತಾದ ವಿಷಯಗಳನ್ನು ಪ್ರಕಟಿಸಿ ಮತ್ತು ಈ ಪತ್ರಿಕೆ 12 ವರ್ಷಗಳಿಂದ ಜೀವಂತವಾಗಿದ್ದರೂ ಪತ್ರಿಕೆಯ ಪರಿಚಯ ಬೆರಳೆಣಿಕೆಯಷ್ಟು ಮಂದಿಗೆ ಮಾತ್ರವಿದೆ. ಆದ್ದರಿಂದ ಈ ಪತ್ರಿಕೆಯು ಬೆಳೆಯಲು ಪತ್ರಿಕೆಯ ಪ್ರಚಾರ ಮಾಡುವುದು ಅತ್ಯವಶ್ಯಕ. ಆದ್ದರಿಂದ ಮೊದಲು ಈ ಕಾರ್ಯವನ್ನು ಆದಷ್ಟು ಬೇಗ ಕೈಗೊಳ್ಳುವುದು ಒಳಿತು.

- ಎಂ. ಕಾವ್ಯಶ್ರೀ, *ಕೆ. ಆರ್. ಪೇಟೆ -571 426*

ಮಾನಸ ಪತ್ರಿಕೆಯನ್ನು ಓದಿ, ಅದನ್ನು ಮಹಿಳೆಯರೇ ಸ್ವಶ್ರಮದಿಂದ ನಡೆಸುತ್ತಿರುವುದು ತಿಳಿದು ಹೆಮ್ಮೆ ಎನಿಸಿದೆ. ನಿಜಕ್ಕೂ ಪತ್ರಿಕೆ ಮಹಿಳೆಯರಲ್ಲಿ ಜಾಗೃತಿ ಮೂಡಿಸಲು ಸಫಲವಾಗುವಂತಿದೆ. ಖಂಡಿತಾ ಚಂದಾದಾರಳಾಗುತ್ತೇನೆ. ಪತ್ರಿಕೆ ಹೊರತರಲು ಶ್ರಮಿಸುತ್ತಿರುವ ಎಲ್ಲರಿಗೂ ನನ್ನ ಅಭಿನಂದನೆಗಳು. ಜಾಗೃತಿ ಮೂಡಿಸುವ ಕೆಲಸದೊಂದಿಗೆ ಸಂಕಷ್ಟದಲ್ಲಿರುವ ಮಹಿಳೆಯರಿಗೆ ನೆರವಾಗುವಂತೆ ಸಂಘಟನೆ ಮಾಡಿಕೊಳ್ಳುವುದು ಉತ್ತಮವಲ್ಲವೆ? ಇಂತಹ ಪ್ರಯತ್ನ ನಡೆದಿದ್ದರೆ; ಅದಕ್ಕಾಗಿ ನನ್ನ ಕೃತಜ್ಞತೆಗಳು.

- ಎಚ್. ಎಸ್. ಅರ್ಪಣಾ, *ಉಜಿರೆ*

'ಒಂದು ಅಧ್ಯಯನ' - ಕರ್ನಾಟಕ ಸಂದರ್ಭದಲ್ಲಿ ವಿವಿಧ ಮಜಲುಗಳು ಬ್ರಾಹ್ಮಣೇತರ ಮಹಾರಾಜರ (ವಡೆಯರ್) ಕಾಲದ ಡೆವಲಪ್‌ಮೆಂಟ್ಸ್, ವಚನ ಸಂದರ್ಭದ ಸಾಮಾಜಿಕ ಕಟ್ಟುಗಳ ಕದಲಿಕೆ, ಶೂದ್ರ, ದಲಿತ ವರ್ಗಗಳ ಸಂಘಟನೆಯು ಕುದಿಯೊಡೆದದ್ದು ಎಲ್ಲವುಗಳ ವಿಷದ ವಿಶ್ಲೇಷಣೆ ಇಂದಿನ ಮಹಿಳಾ ಮೀಸಲಾತಿ ಮಾತುಕತೆಯಲ್ಲಿ ತುಂಬಾ ಪ್ರಸ್ತುತವಾಗಿಸಿದೆ. ಭಾರತೀಯ ಜನ ನಡವಳಿಕೆಯಲ್ಲಿ ಮೀಸಲಾತಿಯು ಎಲ್ಲೋ ಒಂದು ಕಡೆ ದಲಿತ ಪುರುಷನಿಗಾದರೂ ಜೀವ ತುಂಬಿದೆ. ಆದರೆ ದಲಿತ ಮಹಿಳೆ ಯಾವ ಪಾಪಕ್ಕೆ ಹೆಣ್ಣಾಗಿ ಹುಟ್ಟು ಪಡೆದಳೋ? ಈ ಹಿಂದೂ ಸಮುದಾಯ ಯಾವ ಮಟ್ಟದಲ್ಲೂ ಆಕೆಯ ಸ್ವೀಕೃತಿಯನ್ನು ಪಾತಾಳಕ್ಕೆ ತಳ್ಳಿದೆ. ಎಲ್ಲ ವಿಧದಿಂದ ಉತ್ತಮ ಮಟ್ಟಕ್ಕೆ ಬರುವ ದಲಿತ ಪುರುಷನನ್ನು ತೆಕ್ಕೆಗೆ ತೆಗೆದುಕೊಳ್ಳುವ ಮೇಲ್ಜಾತಿಯ ಸಮಾಜ ಅದೇ ದಲಿತ ಹೆಣ್ಣನ್ನು?

ಶೂನ್ಯದಲ್ಲಿ ಫಲಿತತೆ ಹಂತದಿಂದ ದಲಿತ ಹೆಣ್ಣನ್ನು ಮೇಲ್ತರುವ ತಳ ಪ್ರಯತ್ನ ಆಮೂಲಾಗ್ರವಾಗಿ ಆಗಬೇಕು. ಅಸ್ಪೃಶ್ಯ ಮಹಿಳೆ, ಈ ಭಾರತೀಯ ಸಮೂಹದಲ್ಲಿ ಎದ್ದು, ನಿಂತು, ನಡೆಯುವವರೆಗೆ ಅವಳ ವಿಶೇಷ ಮೀಸಲಾತಿ ಜೀವ ಉಸಿರಿನಷ್ಟೇ ಅಗತ್ಯ. ಅದೇ ಹೆಜ್ಜೆಗಳ ಕೂಡ ಚೇತರಿಕೆ ಆಗಬಲ್ಲದು. (ಸರಸ್ವತಿಯವರ 'ದಲಿತ ಸ್ತ್ರೀ' ಲೋಕ ಕರಳು ಕಲಕುತ್ತದೆ) ಮೊನ್ನೆ ಗ್ರಾಮ, ತಾಲ್ಲೂಕು, ಜಿಲ್ಲಾ, ಚುನಾವಣೆಗಳ ಸಂದರ್ಭದಲ್ಲಿ ಬುಗುಡಿ, ಬಾವರಿ, ಮೂಗುತಿಗಟ್ಟಿ, ಚಿನ್ನ, ಸೀರೆ ಕುಬುಸಗಳ ಬಿಚ್ಚಾಡು ತುರುಬಿನಲ್ಲಿ ಚೆಂಡು ಹೂ, ಹಸಿರು ಬಳೆಗಳ ಸಿಗ್ಗು ಒರೆಯಲ್ಲಿ ನಿಜಕ್ಕೂ ಪುಸಿ ಮಬ್ಬಿನ ಕರದುವೋಳಗಿಂದ ಬೀದಿಯ ಬೆಳಕಿಗೆ ಕಿಣಿ ಕಿಣಿ ಹೆಜ್ಜೆ ಸ್ವರದಂತೆ ಅವರ ರಾಜಕೀಯ ಪಾದಾರ್ಪಣ ಬೆಳಗಾಗಲಿ ಬೆಳಗಾಗಲಿ ಮಹಿಳಾ ಮೀಸಲಾತಿ.

- ಉತ್ತನೂರು ರಾಜಮ್ಮ, *ಚಿಂತಾಮಣಿ*

ನಿಮ್ಮ ಪತ್ರಿಕೆಯನ್ನು ನೋಡಿ ಹಾಗೂ ಓದಿ ನನಗೆ ತುಂಬಾ ಸಂತೋಷವಾಯಿತು. ಮಹಿಳೆಯರಲ್ಲಿ ಸಮಾನತೆ ತರಲು ಹಾಗೂ ಅವರನ್ನು ಎಚ್ಚರಿಸುವತ್ತ ನೀವು ಇಡುತ್ತಿರುವ ಹೆಜ್ಜೆ ದಿಟ್ಟ ಹೆಜ್ಜೆಯಾಗಲಿ ಹಾಗೂ ನಿಮಗೆ ಆ ಪತ್ರಿಕೆ ನಡೆಸಲು ಸೂಕ್ತ ಸಹಾಯ ದೊರೆತು ಪತ್ರಿಕೆಯು ದೊಡ್ಡ ಪ್ರಮಾಣದಲ್ಲಿ ಹಲವಾರು ಪುಟಗಳನ್ನು ಹೊತ್ತು ಹೊರ ಹೊಮ್ಮಲಿ ಎಂಬುದು ನನ್ನ ಆಶಯ.

(ಓದುಗರೊಬ್ಬರಿಂದ)

ವರದಿ

○ ವೇ. ವನಜ

2000 ಇಸವಿಯ ಏಪ್ರಿಲ್ ತಿಂಗಳ 24 ರಂದು ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ 'ಮಹಿಳೆಯರ ಹಕ್ಕು ಮತ್ತು ಸ್ಥಾನಮಾನ' ಎಂಬ ವಿಷಯವಾಗಿ ವಿಚಾರ ಸಂಕಿರಣವೊಂದನ್ನು ಏರ್ಪಡಿಸಲಾಗಿತ್ತು. ಇದರ ವ್ಯವಸ್ಥಾಪಕರು ಕೋಮುವಾದಿ ಸಂಘಟನೆ ಎಂಬ (ಅಪ) ಖ್ಯಾತಿಗೆ ಗುರಿಯಾಗಿರುವ ಜಮಾತ್ ಎ ಇಸ್ಲಾಮಿಯ ಮಹಿಳಾ ಘಟಕವಾಗಿತ್ತು. ಈ ಸಂಕಿರಣವನ್ನು ಕರ್ನಾಟಕ ಮತ್ತು ಗೋವಾ ರಾಜ್ಯಗಳ ಘಟಕಗಳು ಏಪ್ರಿಲ್ 21 ರಿಂದ ಏಪ್ರಿಲ್ 28ರವರೆಗೆ ಅಂಗವಾಗಿ ವ್ಯವಸ್ಥೆ ಮಾಡಲಾಗಿತ್ತು. ಈ ಹಿಂದೆ 1982ರಲ್ಲಿ 'ಕೋಮು ಸೌಹಾರ್ದ ಮತ್ತು ಚಾರಿತ್ರ್ಯ ನಿರ್ಮಾಣ' ಸಪ್ತಾಹವನ್ನು, 1991ರಲ್ಲಿ 'ಸಮಾನತೆ ಮತ್ತು ಸಾಮಾಜಿಕ ನ್ಯಾಯ' ಸಪ್ತಾಹಗಳನ್ನು ಆಚರಿಸಲಾಗಿದ್ದು, ಈ ಬಾರಿ ಮಹಿಳೆಯರನ್ನು ಕುರಿತಂತೆ ಮೊಟ್ಟ ಮೊದಲಿಗೆ ರಾಜ್ಯಾದ್ಯಂತ ಕಾರ್ಯಕ್ರಮಗಳನ್ನು ಹಮ್ಮಿಕೊಂಡವು, ಮೂಲ ಭೂತವಾದಿ ಸಂಘಟನೆ ಎಂದು ಕರೆಸಿಕೊಳ್ಳುವ ಜಮಾತ್ ಎ ಇಸ್ಲಾಮಿಯ ಒಂದು ಮಹತ್ವದ ಹಾಗೂ ವಿಶಿಷ್ಟ ಕಾರ್ಯಕ್ರಮವೆನ್ನಬಹುದು. ಅದಕ್ಕಾಗಿ ಅದು ಅಭಿನಂದನಾರ್ಹ. ಈ ಕಾರ್ಯಕ್ರಮ ಹಲವು ಕಾರಣಗಳಿಗಾಗಿ ಮೈಸೂರಿಗರ ಗಮನ ಸೆಳೆಯಿತು: ಕೋಮು ಸಂಘಟನೆಯಾದರೂ ಮಹಿಳಾ ಚಳವಳಿಯ ಮುಂಚೂಣಿಯಲ್ಲಿರುವ ಮುಸ್ಲಿಮೇತರ ಮಹಿಳೆಯರನ್ನು ಗುರುತಿಸಿ, ಸಂಪರ್ಕಿಸಿ ವಿಚಾರ ವಿನಿಮಯ ಮಾಡಿಕೊಳ್ಳುವ ಆಸಕ್ತಿ, ಕಾಳಜಿ, ಕಾತರ ತೋರಿದ್ದುದು; ಅತ್ಯಂತ ಆಸ್ಥೆಯಿಂದ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿದ್ದುದು; ಮುಸ್ಲಿಮೇತರ ಮಹಿಳೆಯರನ್ನು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಿದ್ದುದು ಅವುಗಳಲ್ಲಿ ಮುಖ್ಯವಾದವು. ಕಾರ್ಯಕ್ರಮದಲ್ಲಿದ್ದ ಶಿಸ್ತು, ಅಚ್ಚುಕಟ್ಟುತನ ನನ್ನಂಥವರನ್ನು ಆಕರ್ಷಿಸಿದರೆ, ಅದರಲ್ಲಿ ಭಾಗವಹಿಸಿದವರು ಅವುಗಳಿಂದ ಪ್ರಭಾವಿತರಾಗಿದ್ದುದರಲ್ಲಿ ಆಶ್ಚರ್ಯವಿಲ್ಲ. ಪುರುಷ ಪತ್ರಕರ್ತರಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಸ ನೀಡಲಿಲ್ಲ ಎಂಬ ಮತ್ತೊಂದು ಕಾರಣಕ್ಕೂ ಈ ಕಾರ್ಯಕ್ರಮ ಸಾರ್ವಜನಿಕರ ಗಮನ ಸೆಳೆಯಿತು; ಸಾಕಷ್ಟು ಚರ್ಚೆಗೆ ಗ್ರಾಸ ನೀಡಿತು. ಏನೇ ಆದರೂ ಇಂಥ ಕಾರ್ಯಕ್ರಮ ಮುಸ್ಲಿಂ ಸೋದರಿಯರ ಸ್ಥಾನಮಾನ ದೃಷ್ಟಿಯಿಂದ ಅವರು ತಮ್ಮ ಹಕ್ಕುಗಳ -ಧಾರ್ಮಿಕ, ಸಾಮಾಜಿಕ ಮತ್ತು ಸಂವಿಧಾನಾತ್ಮಕವಾದ ಹಕ್ಕುಗಳ - ಬಗೆಗೆ ಅರಿವನ್ನು ಪಡೆಯುವ ದಿಕ್ಕಿನಲ್ಲಿ ಒಂದು ಮಹತ್ವಪೂರ್ಣ ಹೆಜ್ಜೆಯಾಗಲಿದೆ.

ಇನ್ನು ಮುಂದಿನ ಇಂಥ ಪ್ರಯತ್ನಗಳು ಮುಸ್ಲಿಂ ಮಹಿಳೆಯರ ಚಲನಶೀಲತೆ, ಸಂಘಟನಾ ಸಾಮರ್ಥ್ಯ, ಆತ್ಮವಿಶ್ವಾಸಗಳನ್ನು ಹೆಚ್ಚಿಸಲಿ; ನಿಂತ ನೀರಿನಂತಾಗಿರುವ ವ್ಯವಸ್ಥೆಯಲ್ಲಿನ ಲೋಪದೋಷಗನ್ನು ಪರಾಮರ್ಶಿಸುವ, ಪ್ರಶ್ನಿಸುವ ಧೈರ್ಯ, ತಾವಿದುವರೆಗೆ ವಂಚಿತರಾಗಿದ್ದ ತಮ್ಮದೇ ಹಕ್ಕುಗಳನ್ನು ಪಡೆಯುವ ದಿಕ್ಕಿನಲ್ಲಿ ಹೋರಾಟದ ಕೆಚ್ಚನ್ನು ಪಡೆಯುವಂತಾಗಲೆಂದು ಹಾರೈಸುತ್ತೇನೆ.

ಗೆಲುವು ನಮ್ಮದೇ

○ ರೂಪ

ಬೇಕಿಲ್ಲ ಗೆಳತಿ ನಮಗೆ ಯಾರ ಭಿಕ್ಷೆ,
ಆತ್ಮ ವಿಶ್ವಾಸವೇ ನಮಗೆ ಶ್ರೀರಕ್ಷೆ
ಇಲ್ಲಿ ನೀಲಿ ಬಾನಿಲ್ಲ
ಮಿನುಗುವ ತಾರೆಗಳಿಲ್ಲ
....
ಅದಿಲ್ಲ, ಇದಿಲ್ಲ
ಇಲ್ಲ. ಏನೇನೂ ಇಲ್ಲ!
'ಇಲ್ಲ'ಗಳ ಬದಿಗೊತ್ತಿ
'ಎಲ್ಲ'ವಾಗುವ ಛಲ
ನಮ್ಮಲೇಕಿಲ್ಲಾ?
ಛಲವೊಂದಿದ್ದರೆ ಸಾಕು
ಬರೀ ಹಿಮಾಲಯಕ್ಕೆ ಏನು?
ಬಾಂದಳಕ್ಕೆ ದಾರಿ ಕಟ್ಟಬಲ್ಲೆವು!
ನಾವು!
ಅವರಿವರ ಅಡಿಗಳ ಕೆಳಗಿನ
ನಮ್ಮ ನುಡಿಯುಳಿಸುವುದಷ್ಟೇ ಅಲ್ಲ
ಅವರ ನೆತ್ತಿಯ ಮೇಲೆ
ನಮ್ಮ ಪಡಿ ಮೂಡಿಸಬೇಕು ಗೆಳತಿ!
ಇಲ್ಲಿ ದಾರಿಗಳಲ್ಲ
ಹಳ್ಳ-ಕಂದರ, ಶಿಖರ-ಪ್ರಪಾತಗಳೇ ಎಲ್ಲಾ!
ಅಂತರದಾಟಲು, ಮೀರಿ ನಿಲ್ಲಲು
ತಕ್ಕ ಅವಕಾಶಕೆ ಕಾಯಲೇಬೇಕು!
ಕಾಯಲಿಲ್ಲವೇ ನನ್ನ ನಿನ್ನಂತೆಯೇ
ಮೈಥಿಲಿ-ಪಾಂಚಾಲಿ, ಅಹಲ್ಯೆ-ಶಕುಂತಲೆ?
ತಮ್ಮ ತಮ್ಮ ಗೆಲುವಿಗಾಗಿ?
ತಾಳ್ಮೆಯೇ ಇಲ್ಲಿ ತಪ! ಗೆಳತಿ
ಇಂದಲ್ಲ ನಾಳೆ ಗೆದ್ದೆಗೆಲ್ಲುವೆವೆಂಬ
ವಿಶ್ವಾಸ,
ಆ ಘಳಿಗೆಗಾಗಿ ತಾಳ್ಮೆಯಿಂದ ಕಾಯ್ವ
ಶ್ವಾಸ,
ನಮ್ಮದಾದರೆ.......
ಗೆಲುವು ನಮ್ಮದೇ!

ನಾನು ಮತ್ತು ಅಮಾಯಕ ಬಾಲಕಿ !

ಅದೊಂದು ರಾತ್ರಿ ಸುಮಾರು 8 ಗಂಟೆಯಲ್ಲಿ ಮನೆಗೆ ವಾಪಸ್ಸಾಗುತ್ತಿದ್ದೆ. ಅಷ್ಟರಲ್ಲಿ ಸುಮಾರು 12-13 ವರ್ಷದ ಹುಡುಗಿ, ಲಂಗ, ಜಾಕೇಟು ಹಾಕಿದ್ದು, ಒಂದು ಚಿಕ್ಕ ವ್ಯಾನಿಟಿ ಬ್ಯಾಗ್ ಅನ್ನು ಹೆಗಲಿಗೇರಿಸಿದ್ದಳು. ನನ್ನ ಹತ್ತಿರ ಬಂದು 'ಅಕ್ಕ, ಇಲ್ಲಿ ಪೊಲೀಸ್ ಠಾಣೆ ಎಲ್ಲಿದೆ?" ಎಂದು ಕೇಳಿದಳು. ಅವಳಿಗೆ ಉತ್ತರಿಸಿದೆ, ಅವಳ ಮುಖವನ್ನೇ ನೋಡಿ, ನನ್ನ ಮನಸ್ಸಿನಲ್ಲಿ ಇವಳಿಗೇಕೆ ಪೊಲೀಸ್ ಠಾಣೆ ಬೇಕು, ಅದೂ ಈ ಹೊತ್ತಲ್ಲೀಂತ ಯೋಚಿಸಿದೆ.

ನೀನು ಯಾರಮ್ಮ? ನಿನ್ನ ಹೆಸರೇನು? ಎಲ್ಲಿಂದ ಬಂದಿರುವೆ? ಇನ್ನೂ ಏನೇನೋ ಪ್ರಶ್ನೆ ಕೇಳಿದೆ.

"ನನ್ನ ಮನೆಗೆ ಹೋಗೋಕೆ ದಾರಿ ಗೊತ್ತಿಲ್ಲ, ಅದಕ್ಕೆ" ಅಂದಳು.

"ನಿನ್ನ ಮನೆ ಎಲ್ಲಿದೆ?"

ಅದೆಂಥದೊ ನಗರ ಅಂದ್ಲು. ಅರ್ಥ ಆಗ್ಲಿಲ್ಲ. ಅವಳಿಗೆ, ಯಾವ ಸ್ಥಳದಲ್ಲಿದೀನಿ, ಎಲ್ಲಿಗೆ ಹೋಗ್ಬೇಕೂ, ಏನೂ ಗೊತ್ತಿಲ್ಲ. ಅಕ್ಕನ ಹೆಸರು ಬಿಟ್ರೆ, ಆ ಹುಡಗೀಗೆ ಇನ್ನೇನೂ ಗೊತ್ತಿಲ್ಲ. ಇಂಥಾ ಹುಡುಗೀನಾ 8 ಗಂಟೆ ರಾತ್ರೀಲಿ ಪೊಲೀಸ್ ಠಾಣೆಗೆ ಹೇಗೆ ಕಳಿಸೋದು? ಪೊಲೀಸ್ ಠಾಣೆಗೆ ದಾರಿ ಹೇಳಿದ್ರೂ, ಈ ಏರಿಯಾ ಅವಳಿಗೆ ಹೊಸದಾದ್ರಿಂದ, ತಿಳಿಯೋದಿಲ್ಲಾಂತ ಅನ್ನಿಸ್ತು. ಮನೆಗೆ ಕರೆಕೊಂಡು ಹೋಗೋಣಾಂತ ಯೋಚನೆ ಬಂತು. ಜೊತೆಗೆ ಭಯನೂ ಆಯ್ತು. ಯಾವ Rowdy gang ಇವಳ ಹಿಂದೆ ಇದೆಯೋಂತ.

ಇವಳನ್ನು ಮನೆಗೆ ಕರಕೊಂಡು ಹೋದ್ರೆ ಏನು ತೊಂದರೆ ಆಗಬಹುದೂಂತ ಯೋಚನೆ ಬಂತು. ಮನೆಗೆ ಕರಕೊಂಡು ಹೋಗೋಕೂ ಭಯ, ಪೊಲೀಸ್ ಠಾಣೆಗೆ ಕಳಿಸಕ್ಕೂ ಭಯ. ಏನು ಮಾಡಲಿ ಈಗ? ನಾನು ಇಂಥಾ ಸನ್ನಿವೇಶ ಎದುರಿಸಿದ್ದು ಇದೆ ಮೊದಲನೆಸಲ ಆದ್ದರಿಂದ, ಅವಳಿಗೆ ಎದುರಿಗೆ ಇದ್ದ ಟ್ರಾಫಿಕ್ ಪೊಲೀಸ್ ಹತ್ರ ಹೋಗಿ ಪೊಲೀಸ್ ಠಾಣೆಗೆ ದಾರಿ ಕೇಳು ಹೇಳ್ತಾರೇಂತ ಕಳಿಸಿದೆ. ಸಹಾಯ ಮಾಡಕ್ಕೆ ಆಗ್ಲಿಲ್ವಲ್ಲಾಂತ ಬೇಜಾರಾಯ್ತು. ಆದರೆ ಏನು ಮಾಡಬಹುದಿತ್ತೂಂತ ತೋಚುತ್ತಾ ಇಲ್ಲಾ ? ಈ ಪ್ರಶ್ನೆಗೆ ಪರಿಹಾರ ತಿಳಿಸುವಿರಾ?

○ *ಗೀತಾ*

ಪ್ರಯತ್ನಗಳು

○ *ರೂಪ*

ಕೈಕಾಲು ಕಟ್ಟಿಹಾಕಿ
ದೇಹದೊಂದಿಂಚೂ
ಹೊಸಗಾಳಿಗೆ ಹೊಸ ಬೆಳಕಿಗೆ
ಸೋಕದಂತೆ ಮುಸುಕೆಳೆದು
ಕೂರಿಸಿ
ಎಷ್ಟೊಂದು ದಿನಕಳೆದವೋ......
ಕೂತಲ್ಲೇ ಕೆಟ್ಟು!

ಸಮುದ್ರದ ಅದದೇ ಅಲೆಗಳು
ವ್ಯರ್ಥ ದಂಡೆಗಪ್ಪಳಿಸಿ
ಹಿಂದಿರುಗುವಂತೆ
ಅದದೇ ನಿಟ್ಟುಸಿರು
ಮತ್ತೆ ಮತ್ತೆ ಉಸಿರಾಡಿ
ಇತ್ತೀಚೆಗೆ, ಬೆಳಕು ಕಗ್ಗತ್ತಲಿನೊಡನೆ
ಚಿನ್ನಾಟವಾಡಿ
ಅಲ್ಲಲ್ಲಿ ಹೋರಾಡಿ
ಬದುಕೆಂದರೆ ಕತ್ತಲಲಿ ನಿಶ್ಯಬ್ಧ
ಉಸಿರಾಡುವ ಮೋಡಿ!

ಬೆಳಕು ಸೂಸುವ ಶಕ್ತ
ಕಣ್ಣೆಳಕಿನ ಕಿಡಿ
ನಿರಂತರ ಸಿಡಿದೋ ಏನೋ
ಮುಸುಗಿಗೀಗ ಒಂದೋ, ಎರಡೋ
ಸಣ್ಣತೂತು!
ನಾಳೆಗಾಗಬಹುದು ಮತ್ತಷ್ಟು ಹೊಸತು!

ಕೊನೆಗೊಮ್ಮೆ
ಮುಸುಗು ಹರಿಯಬಹುದು
ಬಂಧನ ಕಡಿಯಬಹುದು
ಹೊಸಗಾಳಿಗೆ ಹೊಸ ಬೆಳಕಿಗೆ
ಮೈಯೊಡ್ಡಬಹುದು

ನಾಳಿನ ಭವ್ಯ ಭವಿತವ್ಯಕೆ
ಇಂದಿನೀ ಕಲ್ಲು ಅಡಿಪಾಯಕ್ಕೆ!

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 100 ರೂ.

ಸಂ. ಮಂಡಳಿ

REGD No. CPMG/KA/BGE/289/2000

BOOK -POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067